ಸಂಪುಟ: 06 ಸಂಚಿಕೆ: 100 ಪುಟಗಳು: 08 ಮಂಗಳವಾರ 23 ಜೂನ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಕನಸಿಗೆ ಅಡಚಣೆಯಿಲ್ಲದ ಸಿದ್ಧಿ
ಗುರಿಗೆ ನಿದ್ದೆ ಮಾಡಲಾಗದಷ್ಟು
ಶ್ರಮ ಬೇಕು.
ಮಲಗಿ ಕನಸು ಕಂಡು,
ಎದ್ದು ಗುರಿ ತಲುಪೋಣ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಅಬಕಾರಿ ಇಲಾಖೆಯ ಇತಿಹಾಸದಲ್ಲಿ ಕ್ರಾಂತಿಕಾರಕ ತಿರುವು ತಂದ ರಾಜ್ಯ ಸರ್ಕಾರದ ಆದೇಶ

• ಉದಯವಾಹಿನಿ,ಬೆಂಗಳೂರು

ಕರ್ನಾಟಕ ಸರ್ಕಾರದ ಆದೇಶವು ರಾಜ್ಯದ ಅಬಕಾರಿ ಇಲಾಖೆಯ ಇತಿಹಾಸದಲ್ಲಿ ಕ್ರಾಂತಿಕಾರಕ ತಿರುವು ತಂದಿದೆ. ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುವ ಈ ನಿರ್ಧಾರವು ಕೇವಲ ಆಡಳಿತಾತ್ಮಕ ತಿದ್ದುಪಡಿ ಅಲ್ಲ. ಇದು ಸಾಮಾಜಿಕ ನ್ಯಾಯದ ಹೊಸ ಪರಿಕಲ್ಪನೆಗೆ ಜೀವ ತುಂಬಿದ ಹೆಜ್ಜೆ. ಇತರ ರಾಜ್ಯಗಳಲ್ಲಿ ಇಂತಹ ಮೀಸಲಾತಿ ವ್ಯವಸ್ಥೆ ಇಲ್ಲದಿರುವುದರಿಂದ, ಕರ್ನಾಟಕವು ದೇಶದಾದ್ಯಂತ ಸಾಮಾಜಿಕ ಒಳಗೊಳ್ಳುವಿಕೆಯ ಮಾದರಿಯಾಗಿ ಹೊರಹೊಮ್ಮಿದೆ. ಈ ಕ್ರಮದ ಮೂಲಕ ಸರ್ಕಾರವು ಆರ್ಥಿಕ ಅವಕಾಶಗಳ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವವನ್ನು ವ್ಯಾಪಾರ ಕ್ಷೇತ್ರದೊಳಗೂ ವಿಸ್ತರಿಸಿದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡುವ ಸರ್ಕಾರದ ಆದೇಶ ಹೊರಬಂದಿದೆ. ಅಬಕಾರಿ ಇಲಾಖೆಯ ಇತಿಹಾಸದಲ್ಲೇ ಹೊಸ ಅಧ್ಯಾಯವನ್ನು ಆರಂಭಿಸಿದೆ.

## ಕಾಂಗ್ರೆಸ್ ಕಾರ್ಯಕ್ರಮದಿಂದ ನೀಟ್ ವಿದ್ಯಾರ್ಥಿಗಳಿಗೆ ತೊಂದರೆ

• ಉದಯವಾಹಿನಿ, ಬೆಂಗಳೂರು

ವೈದ್ಯಕೀಯ ಪ್ರವೇಶಾತಿ ಕೋರ್ಸ್‌ಗಳಿಗೆ ನಡೆದ ನೀಟ್-ಯುಜಿ 2026 ಪರೀಕ್ಷೆಗೆ ಕೆಲವು ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಕೇಂದ್ರಗಳಿಗೆ ಬಾರದಿರಲು ಕಾರಣವಾಗಿದ್ದೇ ಕಾಂಗ್ರೆಸ್ ಸಮಾವೇಶ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ. ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು, ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಹೆಚ್ಚಿನ ವಾಹನಗಳು ವಿವಿಧ ಭಾಗಗಳಿಂದ ಆಗಮಿಸಿ ನಗರದಲ್ಲಿ ಸಂಚಾರಿ ದಟ್ಟಣೆ ಶುರುವಾಯಿತು. ಪರಿಣಾಮ ವಿದ್ಯಾರ್ಥಿಗಳು ರಸ್ತೆ ಮಧ್ಯೆ ಭಾಗದಲ್ಲಿ ಸಿಲುಕಿ ಹಾಕಿಕೊಂಡಿದ್ದರಿಂದ ಸಕಾಲಕ್ಕೆ ಸರಿಯಾಗಿ ಬರಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾಂಗ್ರೆಸ್ ನೇರ ಹೊಣೆ ಎಂದು ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರಮೋದಿ ಅವರು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ದೆಹಲಿ ವಿಮಾನ ನಿಲ್ದಾಣದಲ್ಲಿ ಕಾದರು. ಇದು ವಿದ್ಯಾರ್ಥಿಗಳ ಬಗ್ಗೆ ಅವರಿಗಿರುವ ಬದ್ಧತೆಯನ್ನು ತೋರುತ್ತದೆ. ಆದರೆ ಕಾಂಗ್ರೆಸ್ ನಾಯಕರ ನಗರದಲ್ಲಿ ಸಂಚಾರ ದಟ್ಟಣೆ ಸೃಷ್ಟಿಸಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯದಂತೆ ತೊಂದರೆ ಮಾಡಿದರು. ಇದು ಯಾವ ಪುರುಷಾರ್ಥಕ್ಕೆ ಮಾಡಬೇಕಿತ್ತು ಎಂದು ಪ್ರಶ್ನೆ ಮಾಡಿದರು.ನಗರದ ಅರಮನೆ ಮೈದಾನದಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ಇದಕ್ಕೆ ನಮ ಅಭ್ಯಂತರವಿಲ್ಲ. ನೀಟ್ ಬರೆಯುವ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಆ ಪಕ್ಷದ ಸ್ವಯಂ ಸೇವಕರೇ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಿತ್ತು.

## ರಾಜ್ಯದಲ್ಲಿ ಹಂದಿಜ್ವರದ ಭೀತಿ
### ಮಂಗಳೂರಿನಲ್ಲಿ ಹೆಚ್1ಎನ್1ಗೆ ವ್ಯಕ್ತಿ ಬಲಿ

• ಉದಯವಾಹಿನಿ, ಬೆಂಗಳೂರು

ಉತ್ತರ ಕನ್ನಡ ಜಿಲ್ಲೆ ಕಾರವಾರ ಗ್ರಾಮೀಣ ಪ್ರದೇಶದ 41 ವರ್ಷದ ವ್ಯಕ್ತಿಯೊಬ್ಬರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹಂದಿ ಜ್ವರ (ಎಚ್1ಎನ್1) ದಿಂದ ಮೃತಪಟ್ಟಿದ್ದು ಸೋಂಕುಗಳ ಬಗ್ಗೆ ಹೊಸ ಕಳವಳ ವ್ಯಕ್ತವಾಗಿದೆ. ವರದಿಗಳ ಪ್ರಕಾರ, ಸೋಂಕಿನ ಅನುಮಾನದ ಮೇಲೆ ಕುಟುಂಬ ಸದಸ್ಯರನ್ನು ಸಹ ಮೇಲ್ವಿಚಾರಣೆ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಾವು ಇನ್ಫ್ಲುಯೆನ್ಸ ಯಾವಾಗಲೂ ಸೌಮ್ಯವಾದ ಕಾಯಿಲೆಯಲ್ಲ ಮತ್ತು ಕೆಲವೊಮ್ಮೆ ವಿಶೇಷವಾಗಿ ದುರ್ಬಲ ವ್ಯಕ್ತಿಗಳಲ್ಲಿ ತೀವ್ರ ತೊಡಕುಗಳು, ಆಸ್ಪತ್ರೆಗೆ ಸೇರಿಸುವುದು ಮತ್ತು ಸಾವಿಗೆ ಕಾರಣವನ್ನು ನೆನಪಿಸುತ್ತದೆ. ಎಚ್1ಎನ್1 ವೈರಸ್‌ನಿಂದ ಉಂಟಾಗುವ ಹಂದಿ ಜ್ವರವು 2009 ರ ಸಾಂಕ್ರಾಮಿಕ ರೋಗದ ಸಮಯದಲ್ಲಿ ವಿಶ್ವದಾದ್ಯಂತ ಗಮನ ಸೆಳೆಯಿತು. ಇದನ್ನು ಈಗ ಇತರ ಜ್ವರ ವೈರಸ್‌ಗಳ ಜೊತೆಗೆ ಹರಡುವ ಕಾಲೋಚಿತ ಇನ್ಫ್ಲುಯೆನ್ಸ ತಳಿ ಎಂದು ಪರಿಗಣಿಸಲಾಗಿದ್ದರೂ, ಆರೋಗ್ಯ ತಜ್ಞರು ವಯಸ್ಸಾದವರು, ಗರ್ಭಿಣಿಯರು, ಚಿಕ್ಕ ಮಕ್ಕಳು, ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರು ಮತ್ತು ದುರ್ಬಲಗೊಂಡ ರೋಗನಿರೋಧಕ ಶಕ್ತಿ ಹೊಂದಿರುವವರಿಗೆ ಗಮನಾರ್ಹ ಬೆದರಿಕೆಯನ್ನುಂಟುಮಾಡುತ್ತದೆ ಎಂದು ಗುರುತಿಸಲಾಗಿದೆ.

ಆರಂಭಿಕ ರೋಗನಿರ್ಣಯ, ಆಂಟಿವೈರಲ್ ಚಿಕಿತ್ಸೆ, ವ್ಯಾಕ್ಸಿನೇಷನ್ ಮತ್ತು ತಡೆಗಟ್ಟುವ ಕ್ರಮಗಳು ತೀವ್ರ ಅನಾರೋಗ್ಯ ಮತ್ತು ಸಾವುಗಳನ್ನು ಕಡಿಮೆ ಮಾಡುತ್ತವೆ ಅತ್ಯಂತ ಪರಿಣಾಮಕಾರಿ ಮಾರ್ಗ. ಹಂದಿ ಜ್ವರದ ರೋಗಿಯು ಎಚ್1ಎನ್1 ಸೋಂಕಿಗೆ ಬಲಿಯಾಗಿದ್ದಾನೆ.

ಸ್ವಿಟ್ಜರ್‌ಲ್ಯಾಂಡ್ ಅಮೆರಿಕಾ-ಇರಾನ್ ನಡುವಿನ ಶಾಂತಿ ಮಾತುಕತೆಗೂ ಮುನ್ನ, ಹೆಜ್ಬೊಲ್ಲಾಗೆ ಬೆಂಬಲ ನಿಲ್ಲಿಸದಿದ್ದರೆ ಇರಾನ್ ಮೇಲೆ ಕಠಿಣ ದಾಳಿ ನಡೆಸುವುದಾಗಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದರು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇರಾನ್ ಮುಖ್ಯ ಸಮಾಲೋಚಕ ಗಾಲಿಬಾಫ್, ಬೆದರಿಕೆ ನಮಗೆ ಗಣನೆಯಲ್ಲೂ ಇಲ್ಲ, ಮಾತಿನ ಮೇಲೆ ನಿಗಾ ವಹಿಸಿದಿದ್ದಲ್ಲಿ ನಮ್ಮ ಪಡೆಗಳು ಪ್ರತಿಕ್ರಿಯೆ ನೀಡಲು ಸಿದ್ಧವಾಗಿದೆ ಎಂದು ಖಡಕ್ ವಾರ್ನಿಂಗ್ ನೀಡಿದ್ದಾರೆ.

# ನಮ್ಮ ತಾಳ್ಮೆ ಪರೀಕ್ಷಿಸಬೇಡಿ ಇರಾನ್ ಕಿಡಿ





**ಟರ್ಕಿಶ್ ಇನ್ನೂ ಸ್ಫೋಟ** 

ಲೆಬನಾನ್‌ನಲ್ಲಿ ಕಳೆದ ಕೆಲವು ದಿನಗಳಿಗೆ ಹೋಲಿಸಿದರೆ ಪರಿಸ್ಥಿತಿ ಸ್ವಲ್ಪ ಶಾಂತವಾಗಿದ್ದರೂ, ಉದ್ವಿಗ್ನತೆ ಸಂಪೂರ್ಣವಾಗಿ ಕಡಿಮೆಯಾಗಿಲ್ಲ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ದಕ್ಷಿಣ ಲೆಬನಾನ್‌ನಲ್ಲಿ ಸ್ಥಾಪಿಸಿರುವ ಭದ್ರತಾ ವಲಯವನ್ನು ಅಗತ್ಯವಿರುವವರೆಗೆ ಮುಂದುವರಿಸಲಾಗುವುದು ಎಂದು ಘೋಷಿಸಿದ್ದಾರೆ. ನಮ್ಮ ಜನರ ಸುರಕ್ಷತೆಗಾಗಿ ನಾವು ಲೆಬನಾನ್‌ನಲ್ಲಿ ಭದ್ರತಾ ವಲಯವನ್ನು ನಿರ್ಮಿಸಿದ್ದೇವೆ. ಅಗತ್ಯವಿರುವವರೆಗೆ ಅದನ್ನು ಉಳಿಸಿಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ. ಈ ಹೇಳಿಕೆ ಇರಾನ್‌ನ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

## ಹಸ್ತಲಾಘವ ಮತ್ತು ಜಂಟಿ ಫೋಟೋ ಕಾರ್ಯಕ್ರಮವೂ ರದ್ದು

ಏತನ್ಮಧ್ಯೆ, ಮಾತುಕತೆಯ ಭಾಗವಾಗಿ ಎರಡೂ ದೇಶಗಳ ಪ್ರತಿನಿಧಿಗಳ ನಡುವೆ ಸಾಂಕೇತಿಕ ಹಸ್ತಲಾಘವ ಮತ್ತು ಜಂಟಿ ಛಾಯಾಚಿತ್ರ ಕಾರ್ಯಕ್ರಮ ಆಯೋಜಿಸಲು ಯೋಜಿಸಲಾಗಿತ್ತು. ಆದರೆ, ಟ್ರಂಪ್ ಅವರ ಹೇಳಿಕೆಗಳಿಂದ ಉಂಟಾದ ಉದ್ವಿಗ್ನತೆಯ ಪರಿಣಾಮವಾಗಿ ಇರಾನ್ ನಿಯೋಗ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರಾಕರಿಸಿತು. ಅಮೆರಿಕದ ಮಾಧ್ಯಮ ಪ್ರದರ್ಶನದ ಭಾಗವಾಗಲು ನಾವು ಸಿದ್ಧರಿಲ್ಲ ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದು, ಜಂಟಿ ಮಾಧ್ಯಮ ಕಾರ್ಯಕ್ರಮವನ್ನೂ ಬಹಿಷ್ಕರಿಸಿದರು. ಇದು ಎರಡೂ ದೇಶಗಳ ನಡುವಿನ ನಂಬಿಕೆಯ ಕೊರತೆಯನ್ನು ಮತ್ತೊಮ್ಮೆ ಬಹಿರಂಗಪಡಿಸಿತು.

• ಉದಯವಾಹಿನಿ,ದೆಹಲಿ

ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಆರಂಭವಾದ ಅಮೆರಿಕ ಮತ್ತು ಇರಾನ್ ನಡುವಿನ ಮಹತ್ವದ ಶಾಂತಿ ಮಾತುಕತೆ ಮೊದಲ ದಿನವೇ ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಮಧ್ಯಪ್ರಾಚ್ಯದಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಮುಂದುವರಿದಿದ್ದ ಉದ್ವಿಗ್ನತೆ ಮತ್ತು ಸಂಘರ್ಷಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಆಯೋಜಿಸಲಾದ ಈ ಮಾತುಕತೆ, ಲೆಬನಾನ್‌ನಲ್ಲಿನ ಕದನ ವಿರಾಮದ ವಿಚಾರದಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಠಿಣ ಹೇಳಿಕೆಗಳಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಹಾಗೂ ಇರಾನ್ ಸಂಸತ್ ಸ್ಪೀಕರ್ ಮತ್ತು ಮುಖ್ಯ ಸಂಧಾನಕಾರ ಮೊಹಮ್ಮದ್ ಬಾಘರ್ ಖಾಲಿಬಾಫ್, ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ಇರಾನ್ ನಿಯೋಗ ಈ ಮಾತುಕತೆಯಲ್ಲಿ ಭಾಗವಹಿಸಿದ್ದವು. ಕಳೆದ ವಾರ ಅಮೆರಿಕ ಅಧ್ಯಕ್ಷ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಸಹಿ ಹಾಕಿದ್ದ ಮಧ್ಯಂತರ ಶಾಂತಿ ಒಪ್ಪಂದದ ನಂತರ ನಡೆದ ಮೊದಲ ಉನ್ನತ ಮಟ್ಟದ ಸಭೆ ಇದಾಗಿತ್ತು.

ಆದ್ದರಿಂದ ಈ ಸಭೆಯನ್ನು ಎರಡೂ ರಾಷ್ಟ್ರಗಳ ನಡುವಿನ ಭವಿಷ್ಯದ ಸಂಬಂಧಗಳ ದೃಷ್ಟಿಯಿಂದ ಅತ್ಯಂತ ಮಹತ್ವದ್ದೆಂದು ಪರಿಗಣಿಸಲಾಗಿತ್ತು. ಮಾತುಕತೆ ಆರಂಭಕ್ಕೂ ಮುನ್ನವೇ ಇರಾನ್ ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು.

ಮಧ್ಯಂತರ ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದಾದ ಎಲ್ಲಾ ಕದನರಂಗಗಳಲ್ಲಿ ಕದನ ವಿರಾಮ ಸಂಪೂರ್ಣ ಜಾರಿಗೆ ಬರಬೇಕು ಎಂದು ಒತ್ತಾಯಿಸಿತ್ತು. ವಿಶೇಷವಾಗಿ ಲೆಬನಾನ್‌ನಲ್ಲಿ ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯ ನಡುವೆ ನಡೆಯುತ್ತಿರುವ ದಾಳಿಗಳು ನಿಲ್ಲದಿದ್ದರೆ ಯಾವುದೇ ಪ್ರಗತಿ ಸಾಧ್ಯವಿಲ್ಲ ಎಂದು ಟೆಹ್ರಾನ್ ಸ್ಪಷ್ಟ ಸಂದೇಶ ರವಾನಿಸಿತ್ತು. ಅಮೆರಿಕಾ ಈಗಾಗಲೇ ಒಪ್ಪಿಕೊಂಡಿರುವ ಷರತ್ತುಗಳನ್ನು ಅನುಷ್ಠಾನಗೊಳಿಸಲು ವಿಫಲವಾಗಿದೆ. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗಳು ಕದನ ವಿರಾಮದ ಉಲ್ಲಂಘನೆಯಾಗಿದ್ದು, ಅವುಗಳನ್ನು ತಡೆಯಲು ವಾಷಿಂಗ್ಟನ್ ಅಗತ್ಯ ಕ್ರಮ ಕೈಗೊಳ್ಳಬೇಕು. ಲೆಬನಾನ್ ಯುದ್ಧ ನಿಲ್ಲದಿದ್ದರೆ ಅಣು ಕಾರ್ಯಕ್ರಮ, ನಿರ್ಬಂಧ ಸಡಿಲಿಕೆ ಅಥವಾ ಇತರ ರಾಜತಾಂತ್ರಿಕ ವಿಷಯಗಳ ಬಗ್ಗೆ ಚರ್ಚೆ ನಡೆಸುವುದಿಲ್ಲ ಎಂದು ಇರಾನ್ ಸಂಧಾನ ತಂಡದ ಸದಸ್ಯರು ಸ್ಪಷ್ಟಪಡಿಸಿದ್ದರು.

■ ಟ್ರಂಪ್ ಬೆದರಿಕೆಗೆ ಇರಾನ್ ತಿರುಗೇಟು: ■ ಶಾಂತಿ ಮಾತುಕತೆ ಮಧ್ಯೆಯೇ ವಾಕ್ ಔಟ್; ■ ಅಮೆರಿಕಕ್ಕೆ ಕಠಿಣ ಎಚ್ಚರಿಕೆ, ■ ಲೆಬನಾನ್ ಕದನ ವಿರಾಮ ಜಾರಿಗೆ ಒತ್ತಾಯಿಸಿದ ಇರಾನ್, ■ ಆರ್ಥಿಕ ನಿರ್ಬಂಧ ಸಡಿಲಿಕೆ ಕುರಿತ ಚರ್ಚೆ

**1** ನಿಮ್ಮ ಬೆದರಿಕೆ ನಮ್ಮ ಪರಿಗಣನೆಯಲ್ಲೂ ಇಲ್ಲ ಎಂದು ಇನ್ನೂ ಅರ್ಥವಾಗಿಲ್ವೇ ಇರಾನ್ ಬೆದರಿಕೆ ಹಾಕಿದ ಟ್ರಂಪ್‌ಗೆ ಗಾಲಿಬಾಫ್ ಖಡಕ್ ತಿರುಗೇಟು

**2** ಅಮೆರಿಕಾ-ಇರಾನ್ ಶಾಂತಿ ಮಾತುಕತೆಗೂ ಮುನ್ನ ಹೆಜ್ಬೊಲ್ಲಾಗೆ ಬೆಂಬಲ ನಿಲ್ಲಿಸದಿದ್ದರೆ ಇರಾನ್ ಮೇಲೆ ಕಠಿಣ ದಾಳಿ ಮಾಡುವುದಾಗಿ ಬೆದರಿಕೆ ಹಾಕಿದ್ದ ಟ್ರಂಪ್

**3** ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಅಮೆರಿಕಾ-ಇರಾನ್ ಮಾತುಕತೆಯ ಮೇಲೂ ಬಿತ್ತು ಅಧ್ಯಕ್ಷರ ಬೆದರಿಕೆ ಹೇಳಿಕೆ!

### ಕದನ ವಿರಾಮದ ವಿಚಾರದಲ್ಲಿ ಭಿನ್ನಾಭಿಪ್ರಾಯ



**ಮಹತ್ವದ ಚರ್ಚೆ**

ಮೊದಲ ಸುತ್ತಿನ ಮಾತುಕತೆಯಲ್ಲಿ ಹಲವು ಮಹತ್ವದ ವಿಷಯಗಳು ಚರ್ಚೆಗೆ ಬಂದವು. ಇರಾನ್ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಸಡಿಲಿಸುವುದು, ಇರಾನ್‌ನ ತೈಲ ರಫ್ತಿಗೆ ಅನುಮತಿ ನೀಡುವುದು, ವಿದೇಶಗಳಲ್ಲಿ ಸ್ಥಗಿತಗೊಂಡಿರುವ ಇರಾನ್‌ನ ಬಿಲಿಯನ್ ಗಟ್ಟಲೆ ಡಾಲರ್ ಮೌಲ್ಯದ ಆಸ್ತಿಗಳನ್ನು ಬಿಡುಗಡೆ ಮಾಡುವುದು ಹಾಗೂ ಭದ್ರತಾ ವಿಷಯಗಳ ಕುರಿತು ಚರ್ಚೆಗಳು ನಡೆದವು. ಕೆಲವು ವರದಿಗಳ ಪ್ರಕಾರ, ಇರಾನ್ ತೈಲ ರಫ್ತಿನ ಮೇಲಿನ ನಿರ್ಬಂಧಗಳಿಗೆ ವಿನಾಯಿತಿ ನೀಡುವ ಕರಡು ಚೌಕಟ್ಟು ಸಿದ್ಧಗೊಂಡಿದ್ದು, ಅದನ್ನು ಶೀಘ್ರದಲ್ಲೇ ಜಾರಿಗೆ ತರುವ ಕುರಿತು ಚರ್ಚೆಗಳು ನಡೆದಿವೆ. ಜೊತೆಗೆ ಕತಾರ್ ಮಧ್ಯಸ್ಥಿಕೆಯಲ್ಲಿ ಇರಾನ್‌ನ ಸ್ಥಗಿತಗೊಂಡಿರುವ ನಿಧಿಗಳ ಬಿಡುಗಡೆ ಕುರಿತ ತಾಂತ್ರಿಕ ಪ್ರಕ್ರಿಯೆಗಳ ಬಗ್ಗೆಯೂ ಚರ್ಚೆ ನಡೆದಿದೆ .



### ಟ್ರಂಪ್ ಹೇಳಿಕೆಯಿಂದ ತಿರುವು ಪಡೆದ ಮಾತುಕತೆ

**ವಾಷಿಂಗ್ಟನ್ ಅಗತ್ಯ ಕ್ರಮ**

**ಬೆದರಿಕೆಗೆ ತಕ್ಕ ಪ್ರತಿಕ್ರಿಯೆ**

### ಅಮೆರಿಕಕ್ಕೆ ಖಾಲಿಬಾಫ್ ಖಡಕ್ ಎಚ್ಚರಿಕೆ

ಮಾತುಕತೆಯ ನಂತರ ಮಾತನಾಡಿದ ಇರಾನ್‌ನ ಮುಖ್ಯ ಸಂಧಾನಕಾರ ಮೊಹಮ್ಮದ್ ಬಾಘರ್ ಖಾಲಿಬಾಫ್, ಅಮೆರಿಕ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅಮೆರಿಕದ ಬೆದರಿಕೆಗಳು ಪರಿಣಾಮಕಾರಿಯಾಗಿದ್ದರೆ ಅವರು ಇಂದು ಈ ಮಟ್ಟದ ಸಂಕಷ್ಟಕ್ಕೆ ಸಿಲುಕುತ್ತಿರಲಿಲ್ಲ. ಅವರ ಬೆದರಿಕೆಗಳನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲ.

ಅಮೆರಿಕ ತನ್ನ ಹೇಳಿಕೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು, ಎಂದು ಹೇಳಿದ್ದಾರೆ. ಇದರೊಂದಿಗೆ ಅವರು ಮತ್ತಷ್ಟು ಕಠಿಣ ಸಂದೇಶ ನೀಡುತ್ತಾ, ನಮ್ಮ ಸಶಸ್ತ್ರ ಪಡೆಗಳು ಯಾವುದೇ ರೀತಿಯ ದಾಳಿಗೆ ಅಥವಾ ಬೆದರಿಕೆಗೆ ತಕ್ಕ ಪ್ರತಿಕ್ರಿಯೆ ನೀಡಲು ಸಂಪೂರ್ಣ ಸಜ್ಜಾಗಿವೆ.

ಅವರು ಏನೇ ಹೇಳಲಿ, ನಾವು ನಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಸಿದ್ದಾರೆ. ಈ ಹೇಳಿಕೆ ಮಧ್ಯಪ್ರಾಚ್ಯದ ರಾಜಕೀಯ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದ್ದು, ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆ ಮತ್ತೆ ತೀವ್ರಗೊಳ್ಳುವ ಸಾಧ್ಯತೆಯ ಬಗ್ಗೆ ಆತಂಕ ಹೆಚ್ಚಿಸಿದೆ.

## ಭಾವಸಾರ ಕ್ಷತ್ರಿಯ ಅಭಿವೃದ್ಧಿ ನಿಗಮ ಪ್ರಾರಂಭಕ್ಕೆ ಸರ್ಕಾರಕ್ಕೆ ಒತ್ತಾಯ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸುಮಾರು 25 ಲಕ್ಷಕ್ಕೂ ಅಧಿಕ ಮಂದಿ ಮತದಾರರನ್ನು ಹೊಂದಿರುವ ಭಾವಸಾರ ಕ್ಷತ್ರಿಯ ಜನಾಂಗಕ್ಕೆ ಕೂಡಲೇ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರ ಮುಂದಾಗ ಬೇಕೆಂದು ಭಾವಸಾರ ಕ್ಷತ್ರಿಯ ರಾಷ್ಟ್ರೀಯ ಯುವ ಅಧ್ಯಕ್ಷರಾದ ಮಹೇಶ್. ಚ ತೇಲ್ಕರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ

ಉದಯವಾಹಿನಿ ಪತ್ರಿಕೆಯೊಂದಿಗೆ ಮಾತನಾಡಿದ ಅವರು ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯ ತಾಲ್ಲೂಕು ಗ್ರಾಮ ಹಳ್ಳಿ ಹಳ್ಳಿಗಳಲ್ಲಿಯೂ ಸಹ ಸಮುದಾಯದ ನಾಗರಿಕರು ವಾಸಿಸುತ್ತಿದ್ದು ಬಹುತೇಕ ಶಾಂತಿಯುತ ಸಮಾಜ ವಾಗಿದ್ದು ಹೆಚ್ಚಾಗಿ ಟೈಲರಿಂಗ್ ವೃತ್ತಿಯಿಂದ ತಮ್ಮ ಜೀವನ ನಡೆಸುತ್ತಿದ್ದು ಸರ್ಕಾರದ ಯೋಜನೆಗಳು ಮತ್ತು ಸರ್ಕಾರದಿಂದ ತಮ್ಮ ಕುಟುಂಬಗಳಿಗಾಗಲಿ ತಮ್ಮ ಮಕ್ಕಳಿಗಾಗಲಿ ಯಾವುದೇ ಸೌಲಭ್ಯಗಳು ದೊರಕದೆ ವಂಚಿತರಾಗಿ ಬದುಕುತ್ತಿದ್ದಾರೆ ಇಷ್ಟಲ್ಲದೆ ಸಮುದಾಯದ ವತಿಯಿಂದ ರಾಜ್ಯದಲ್ಲಿ ಒಬ್ಬ ಶಾಸಕರು ಅಥವಾ ಸಚಿವರು ಸಹ ಇರುವುದಿಲ್ಲ . ನೂತನ ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ್ ಅವರು ನಮ್ಮ ಭಾವಸಾರ ಕ್ಷತ್ರಿಯ ಸಮುದಾಯಕ್ಕೆ ಭಾವಸಾರ ಕ್ಷತ್ರಿಯ ಅಭಿವೃದ್ಧಿ ನಿಗಮವನ್ನು ಘೋಷಿಸಬೇಕೆಂದು ಕೂಡಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ 25 ಲಕ್ಷಕ್ಕೂ ಹೆಚ್ಚು ಭಾವಸಾರ ಕ್ಷತ್ರಿಯ ಸಮಾಜದ ಸಮಾಜ ಬಾಂಧವರ ಪರವಾಗಿ ಹಾಗೂ ಸಮುದಾಯದ ಮುಖಂಡರೊಂದಿಗೆ ಬೇಡಿಕೆ ಇಡಲಾಗುವುದೆಂದು ರಾಷ್ಟ್ರೀಯ ಭಾವಸಾರ ಕ್ಷತ್ರಿಯ ಸಮಾಜದ ಯುವ ಮೋರ್ಚಾ ಅಧ್ಯಕ್ಷರಾದ ಮಹೇಶ್. ಚ.ತೇಲಕರ್ ಪತ್ರಿಕೆಗೆ ತಿಳಿಸಿದ್ದಾರೆ.





## ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ಸಂಪುಟ ಸಭೆ ತೀರ್ಮಾನದಂತೆ ರಾಜ್ಯಾದ್ಯಂತ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಪೂರ್ಣಗೊಂಡ ವಾಸದ ಮನೆ ಕಟ್ಟಡಗಳಿಗೆ ಒಸಿ ಪಡೆಯುವುದರಿಂದ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯಾದ್ಯಂತ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿರುವ ಪ್ರಕರಣಗಳಿಗೆ ಹಾಗೂ ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಕಟ್ಟಡ ಪೂರ್ಣಗೊಂಡಿರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸುವಂತೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ, ವಿನಾಯಿತಿ ನೀಡಿ ಸರ್ಕಾರ ಆದೇಶಿಸಿದೆ.

ಜೂನ್ 20ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ 2400 ಚದರ್ ಅಡಿಗಳವರೆಗೆ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ನಿವೇಶನಗಳಲ್ಲಿ ನಿರ್ಮಿಸಲಾದ ಜಿ+3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ವಿಶೇಷ ವಿನಾಯಿತಿ ನೀಡಲು ತೀರ್ಮಾನಿಸಲಾಗಿತ್ತು. ಈ ವಿನಾಯಿತಿ 31 ಮೇ 2026ರೊಳಗಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವವರು, ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿರುವವರು ಹಾಗೂ ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಕಟ್ಟಡ ಪೂರ್ಣಗೊಳಿಸಿರುವವರಿಗೆ ಮಾತ್ರ ಅನ್ವಯಿಸುತ್ತದೆ.

ಇಂತಹ ಅರ್ಜಿದಾರರಿಗೆ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಒಂದು ಬಾರಿಗೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ ವಿದ್ಯುತ್ ಸಂಪರ್ಕಕ್ಕೆ ವಿನಾಯಿತಿ ದೊರೆಯಲಿದೆ. ಇನ್ನು, ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ, ರೇಷ್ಮೆ ಗೂಡಿನ ಮನೆ - ಇವುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ, ವಿನಾಯಿತಿ ನೀಡಿ ಆದೇಶಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲು ತೀರ್ಮಾನಿಸಲಾಗಿದೆ.

ಈ ನಿರ್ಧಾರವನ್ನು ಜಾರಿಗೊಳಿಸಲು ಇಂಧನ ಇಲಾಖೆಗೆ ಸಚಿವ ಸಂಪುಟವು ಸ್ಪಷ್ಟ ಸೂಚನೆ ನೀಡಿದೆ. ಈ ನಿರ್ಧಾರದಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯುವ ಪ್ರಕ್ರಿಯೆ ಸುಗಮವಾಗಲಿದೆ ಎಂದು ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

# ಕರ್ನಾಟಕದಾದ್ಯಂತ ಪರವಾನಗಿ ಭೂಮಾಪಕರ ಮುಷ್ಕರ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹ ಹಾಗೂ ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ

**ಖಾಸಗಿ ಏಜೆನ್ಸಿಗಳ ಮೂಲಕ ಸರ್ವೇ ಖಂಡನೀಯ ಕ್ರಮ**

ರಾಜ್ಯದಲ್ಲಿ ಸುಮಾರು 3,000 ಸರ್ಕಾರಿ ಭೂಮಾಪಕರು ಮತ್ತು 4,500 ಪರವಾನಗಿ ಭೂಮಾಪಕರು ಲಭ್ಯವಿರುವ ಸಂದರ್ಭದಲ್ಲಿ, ಪರವಾನಗಿ ಭೂಮಾಪಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಬದಲು ಖಾಸಗಿ ಏಜೆನ್ಸಿಗಳ ಮೂಲಕ ಸರ್ವೇ ಕಾರ್ಯಗಳನ್ನು ನಡೆಸಲು ಸರ್ಕಾರ ಮುಂದಾಗಿರುವುದು ಖಂಡನೀಯ. ಇದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಬದಲು ಹಲವು ವರ್ಷಗಳಿಂದ ಇಲಾಖೆಗೆ ಸೇವೆ ಸಲ್ಲಿಸುತ್ತಿರುವ ಪರವಾನಗಿ ಭೂಮಾಪಕರನ್ನು ನಿರ್ಲಕ್ಷಿಸುವ ಕ್ರಮವಾಗಿದೆ. ಸಾರ್ವಜನಿಕ ಹಿತಾಸಕ್ತಿ ಮತ್ತು ಭೂ ದಾಖಲೆಗಳ ವಿಶ್ವಾಸಾರ್ಹತೆಯ ದೃಷ್ಟಿಯಿಂದಲೂ ಈ ನಿರ್ಧಾರ ಸೂಕ್ತವಲ್ಲ.

**ಅಮಾನತು ಆದೇಶಗಳ ವಿರುದ್ಧ ತೀವ್ರ ಆಕ್ಷೇಪ:** ಶಾಂತಿಯುತವಾಗಿ ನಡೆಯುತ್ತಿರುವ ಮುಷ್ಕರದ ಒಗ್ಗಟ್ಟನ್ನು ದುರ್ಬಲಗೊಳಿಸುವ ಉದ್ದೇಶದಿಂದ 2020ರ ನಂತರ ನೇಮಕಗೊಂಡಿರುವ ಸುಮಾರು 300 ರಿಂದ 350 ಯುವ ಪರವಾನಗಿ ಭೂಮಾಪಕರನ್ನು ಗುರಿಯಾಗಿಸಿಕೊಂಡು ಅಮಾನತು ಆದೇಶಗಳನ್ನು ಹೊರಡಿಸಿರುವುದು ಖಂಡನೀಯ. ಜೂನಿಯರ್ ಹಾಗೂ ಸೀನಿಯರ್ ಬ್ಯಾಚ್‌ಗಳ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸಿ ಹೋರಾಟವನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ಸಂಘ ತೀವ್ರವಾಗಿ ವಿರೋಧಿಸುತ್ತದೆ.



ಭ್ರಷ್ಟಾಚಾರ ಹಾಗೂ ದಾಖಲೆಗಳ ಅಸಂಗತತೆಗೆ ಅವಕಾಶ ಸೃಷ್ಟಿಯಾಗುತ್ತಿದೆ. ಸ್ಥಳ ಪರಿಶೀಲನೆ ಮತ್ತು ಅಧಿಕೃತ ಭೂಮಾಪಕರ ದೃಢೀಕರಣವಿಲ್ಲದೆ ನಕ್ಷೆಗಳನ್ನು ಅನುಮೋದಿಸುವುದು ಭೂ ವಿವಾದಗಳು, ಕಾನೂನು ಸಮಸ್ಯೆಗಳು ಹಾಗೂ ನ್ಯಾಯಾಲಯದ ವ್ಯಾಜ್ಯಗಳಿಗೆ ಕಾರಣವಾಗುವ ಸಾಧ್ಯತೆ ಇದೆ. ಆದ್ದರಿಂದ ರೈತರು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಸ್ವಾವಲಂಬಿ ಯೋಜನೆಯನ್ನು ತಕ್ಷಣವೇ ಸ್ಥಗಿತಗೊಳಿಸಿ, ಅಧಿಕೃತ ಸರ್ವೇ ವ್ಯವಸ್ಥೆಯ ಮೂಲಕವೇ ಭೂಮಾಪನ ಕಾರ್ಯಗಳನ್ನು ನಡೆಸಬೇಕು.

**ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿಲ್ಲ**

• ಉದಯವಾಹಿನಿ, ಬೆಂಗಳೂರು

ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘ (ರಿ.) ಬೆಂಗಳೂರು ನೇತೃತ್ವದಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರು ತಮ್ಮ ನ್ಯಾಯಯುತ ಬೇಡಿಕೆಗಳಾದ ಸರ್ಕಾರಿ ಭೂಮಾಪಕರಾಗಿ ಖಾಯಂ ನೇಮಕಾತಿ, ಸೇವಾ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ, ಸಾಮಾಜಿಕ ಭದ್ರತೆ ಹಾಗೂ ವೃತ್ತಿ ಗೌರವಕ್ಕಾಗಿ ಕಳೆದ ನಾಲ್ಕು ತಿಂಗಳಿಂದ ಕೆಲಸ ಸ್ಥಗಿತಗೊಳಿಸಿ ಮುಷ್ಕರ ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರವು 2002 ರಿಂದ 2024ರವರೆಗೆ ವಿವಿಧ ಹಂತಗಳಲ್ಲಿ ಪರವಾನಗಿ ಭೂಮಾಪಕರನ್ನು ನೇಮಕ ಮಾಡಿಕೊಂಡು ಇಲಾಖೆಯ ಕಾರ್ಯಗಳನ್ನು ನಿರ್ವಹಿಸಿಕೊಂಡು ಬಂದಿದೆ. ಪ್ರಸ್ತುತ ರಾಜ್ಯದಲ್ಲಿ ಸುಮಾರು 4,500 ಪರವಾನಗಿ ಭೂಮಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪರವಾನಗಿ ಭೂಮಾಪಕರ ನೇಮಕಾತಿ ಅರ್ಹತೆ, ವಿದ್ಯಾರ್ಹತೆ, ತರಬೇತಿ, ಜವಾಬ್ದಾರಿ, ಕೆಲಸದ ಸ್ವರೂಪ ಮತ್ತು ನಿಯಮಗಳು ಸರ್ಕಾರಿ ಭೂಮಾಪಕರಿಗೆ ಸಮಾನವಾಗಿದ್ದರೂ, ಅವರಿಗೆ ಮಾಸಿಕ ವೇತನ, ಇಎಸ್ಐ, ಪಿಎಫ್, ಆರೋಗ್ಯ ವಿಮೆ, ಸೇವಾ ಭದ್ರತೆ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿಲ್ಲ. ಸರ್ಕಾರ ಮತ್ತು ಇಲಾಖೆ ಸರ್ಕಾರಿ ಕೆಲಸವನ್ನು ಮಾಡಿಸಿಕೊಂಡು, ಉದ್ಯೋಗಿಗಳಿಗೆ ಕನಿಷ್ಠ ಭದ್ರತೆಯನ್ನೂ ನೀಡದಿರುವುದು ಅತ್ಯಂತ ವಿಷಾದನೀಯ. ಮುಷ್ಕರದ ಪರಿಣಾಮವಾಗಿ ಕಳೆದ ನಾಲ್ಕು ತಿಂಗಳಲ್ಲಿ ಅಂದಾಜು 6 ರಿಂದ 7 ಲಕ್ಷ ರೈತರು ಮತ್ತು ಸಾರ್ವಜನಿಕರ ಭೂಮಾಪನ ಅರ್ಜಿಗಳು ಬಾಕಿ ಉಳಿದಿವೆ. ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಪರವಾನಗಿ ಭೂಮಾಪಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದರೂ, ಅವರ ನ್ಯಾಯಯುತ ಬೇಡಿಕೆಗಳಿಗೆ ಸರ್ಕಾರದಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ದೊರೆತಿಲ್ಲ.

**ಸ್ವಾವಲಂಬಿ ಯೋಜನೆ ಅವೈಜ್ಞಾನಿಕ ಮತ್ತು ರೈತರಿಗೆ ಹಾನಿಕಾರಕ:** ಭೂಮಾಪನ ಕಾರ್ಯವು ಅತ್ಯಂತ ತಾಂತ್ರಿಕ ಜ್ಞಾನ, ಅನುಭವ ಹಾಗೂ ಸ್ಥಳ ಪರಿಶೀಲನೆ ಅಗತ್ಯವಿರುವ ಕಾರ್ಯವಾಗಿದೆ. ಆದರೆ ಸರ್ಕಾರ ಜಾರಿಗೆ ತಂದಿರುವ ''ಸ್ವಾವಲಂಬಿ'' ಯೋಜನೆಯಡಿ ರೈತರು ಅಥವಾ ಸಾರ್ವಜನಿಕರು ಸ್ವತಃ ಜಮೀನು ಅಳತೆ ಮಾಡಿ ನಕ್ಷೆ ಸಿದ್ಧಪಡಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಯೋಜನೆಯಿಂದ ಕೆಲಸಗಳು ವೇಗವಾಗಿ ಆಗುತ್ತವೆ ಎಂದು ಹೇಳಲಾಗುತ್ತಿದ್ದರೂ, ವಾಸ್ತವದಲ್ಲಿ ರೈತರು ಮತ್ತು ಸಾರ್ವಜನಿಕರು ಮಧ್ಯವರ್ತಿಗಳ ಅವಲಂಬಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಅನಗತ್ಯ ಹಣಕಾಸಿನ ಹೊರೆಯಾಗುವುದರ ಜೊತೆಗೆ ವಂಚನೆ,




## ಪರವಾನಗಿ ಭೂಮಾಪಕರ ವಾಸ್ತವ ಸ್ಥಿತಿ

1 ಸರ್ಕಾರಿ ಭೂಮಾಪಕರಂತೆ ಸಮಾನ ಅರ್ಹತೆ, ತರಬೇತಿ, ಜವಾಬ್ದಾರಿ ಮತ್ತು ಕೆಲಸ ನಿರ್ವಹಣೆ.

2 ಪೂರ್ಣಗೊಂಡ ಕಡತಕ್ಕೆ ಕೇವಲ 1,200 ಹಾಗೂ ವಿವಿಧ ಕಾರಣಗಳಿಂದ ಪೂರ್ಣಗೊಳ್ಳದ ಕಡತಕ್ಕೆ 360 ಮಾತ್ರ ಪಾವತಿ.

3 ನಿಯಮಿತ ವೇತನ ವ್ಯವಸ್ಥೆ, ಪಿಎಫ್, ಇಎಸ್ಐ, ಆರೋಗ್ಯ ವಿಮೆ ಸೇರಿದಂತೆ ಯಾವುದೇ ಸಾಮಾಜಿಕ ಭದ್ರತೆ ಇಲ್ಲ.

4 ಕಚೇರಿಯಲ್ಲಿ ಕುಳಿತುಕೊಳ್ಳಲು ಮೂಲಭೂತ ವ್ಯವಸ್ಥೆಗಳ ಕೊರತೆ.

5 23 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿರುವ ಹಿರಿಯ ಪರವಾನಗಿ ಭೂಮಾಪಕರಿಗೂ ಪದೋನ್ನತಿ ಅಥವಾ ಸೇವಾ ಭದ್ರತೆ ಇಲ್ಲ.

6 ಮಳೆ, ಬಿಸಿಲು, ಕಾಡುಪ್ರಾಣಿಗಳ ದಾಳಿ, ವಿಷಜಂತುಗಳ ಅಪಾಯ, ರಸ್ತೆ ಅಪಘಾತಗಳು, ಬೆದರಿಕೆ ಕರೆಗಳು ಹಾಗೂ ದೈಹಿಕ-ಮಾನಸಿಕ ಹಲ್ಲೆಗಳಂತಹ ಸವಾಲಿನ ಪರಿಸ್ಥಿತಿಗಳಲ್ಲಿಯೂ ಕರ್ತವ್ಯ ನಿರ್ವಹಣೆ.

**ಪ್ರಮುಖ ಬೇಡಿಕೆಗಳು**

1. ಪರವಾನಗಿ ಭೂಮಾಪಕರನ್ನು ಸರ್ಕಾರಿ ಭೂಮಾಪಕರಾಗಿ ಖಾಯಂ ಮಾಡಿಕೊಳ್ಳಬೇಕು
2 ಸಮಾನ ಕೆಲಸಕ್ಕೆ ಸಮಾನ ವೇತನ, ಸಮಾನ ಸೌಲಭ್ಯ, ಸೇವಾ ಭದ್ರತೆ ಮತ್ತು ವೃತ್ತಿ ಗೌರವ ಕಲ್ಪಿಸಬೇಕು
3 ವೇತನ ವ್ಯವಸ್ಥೆ ಜಾರಿಗೊಳಿಸಿ, ಆರೋಗ್ಯ ವಿಮೆ, ಪಿಎಫ್, ಭತ್ಯೆಗಳು, ನಿವೃತ್ತಿ ಗೌರವಧನ ಹಾಗೂ ಕುಟುಂಬ ಸಹಾಯಧನ ವ್ಯವಸ್ಥೆ ಮಾಡಬೇಕು
4 ಬೇಡಿಕೆಗಳು ಈಡೇರುವವರೆಗೆ ಸರ್ಕಾರಿ ಭೂಮಾಪಕರು ಹಾಗೂ ಪರವಾನಗಿ ಭೂಮಾಪಕರು ಹುದ್ದೆಗಳ ಹೊಸ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು
5 ಪರವಾನಗಿ'ವ್ಯವಸ್ಥೆಗೆ ಅಂತ್ಯ ಹಾಡಿ, ಶಾಶ್ವತ ಮತ್ತು ಭದ್ರವಾದ ಸೇವಾ ರೂಪುರೇಷೆ ಜಾರಿಗೊಳಿಸಬೇಕು
6 ಸ್ವಾವಲಂಬಿ ಯೋಜನೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು 7 ಖಾಸಗಿ ಏಜೆನ್ಸಿಗಳ ಮೂಲಕ ಸರ್ವೇ ಕಾರ್ಯ ನೀಡುವ ಆದೇಶವನ್ನು ಹಿಂಪಡೆಯಬೇಕು.



# ಆರ್‌ಎಸ್‌ಎಸ್ ನೋಂದಣಿ ವಿವಾದ; ಎಲ್ಲರೂ ಮಾತಾಡಿ ಆಯ್ತು; ಡಿಕೆ ಶಿವಕುಮಾರ್ ಮಾತ್ರ ತಾವಾಯ್ತು, ತಮ್ಮ ಕೆಲಸವಾಯ್ತು! ಈ ಮೌನವೇಕೆ?: ಮೋಹನ್ ಭಾಗವತ್

• ಉದಯವಾಹಿನಿ, ಬೆಂಗಳೂರು

ಈ ಘಟನೆ ನಡೆದು ಸರಿಸುಮಾರು ಒಂದು ವರ್ಷ ಕಳೆದಿದೆ. ಈಗ ಡಿಕೆ ಶಿವಕುಮಾರ್ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾರೆ. ಡಿಕೆಶಿ ಸಂಪುಟದಲ್ಲಿ ಗೃಹ ಸಚಿವರಾಗಿರುವ ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್ ನೋಂದಣಿ ವಿವಾದದ ಕಿಡಿಹೊತ್ತಿಸಿದ್ದಾರೆ. ಗೃಹ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ, ಪ್ರಿಯಾಂಕ್ ಖರ್ಗೆ ಅವರು ನೋಂದಣಿ ಪ್ರಕ್ರಿಯೆ ಆರಂಭಿಸುವಂತೆ ಆರ್‌ಎಸ್‌ಎಸ್‌ಗೆ ಸೂಚನೆ ನೀಡುವ ಮೂಲಕ, ರಾಜ್ಯ ರಾಜಕಾರಣದಲ್ಲಿ ಸರಣಿ ಚರ್ಚೆಗಳಿಗೆ ನಾಂದಿ ಹಾಡಿದ್ದಾರೆ. ಸಂಘ


ಉದಯವಾಹಿನಿ ಚಿತ್ರ

ನೋಂದಣಿ ಬಗ್ಗೆ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗಳು ಇದಕ್ಕೆ ಪ್ರತಿಯಾಗಿ ಪ್ರತಿಪಕ್ಷ ಬಿಜೆಪಿ ನಾಯಕರ ಹೇಳಿಕೆಗಳು, ಸಾಮಾಜಿಕ ಚಿಂತಕರ ಅಭಿಪ್ರಾಯಗಳು, ಈ ಬಗ್ಗೆ ಖುದ್ದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಸ್ಪಷ್ಟನೆ, ಇವೆಲ್ಲವೂಗಳ ಹೊರತಾಗಗಿಯೂ ಮುಖ್ಯಮಂತ್ರಿ, ಡಿಕೆ ಶಿವಕುಮಾರ್ ಈ ವಿಚಾರದಲ್ಲಿ ಮೌನಕ್ಕೆ ಶರಣಾಗಿದ್ದಾರೆ. ವಿಧಾನಸಭೆಯಲ್ಲಿ ನಮಸ್ತೇ ಸದಾ ವತ್ಸಲೇ.. ಹಾಡುವ ಮೂಲಕ ಸಂಚಲನ ಸೃಷ್ಟಿಸಿದ್ದ ಡಿಕೆಶಿ, ಈಗ ಸಂಘದ ನೋಂದಣಿ ಕುರಿತ ಚರ್ಚೆಯಲ್ಲಿ ಏಕೆ ಭಾಗವಹಿಸುತ್ತಿಲ್ಲ ನಮಸ್ತೇ ಸದಾ ವತ್ಸಲೇ. ಸದನದಲ್ಲಿ ರಾಜ್ಯದ ಗೃಹ ಸಚಿವರಾಗಿರುವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ವಿರುದ್ಧ ಆಲ್ ಔಟ್ ಅಟ್ಯಾಕ್ ಮಾಡುತ್ತಿದ್ದಾರೆ. ಸಂಘ ನೋಂದಣಿ ಏಕೆ ಆಗಿಲ್ಲ ಎಂದು ಶುರುವಾದ ಚರ್ಚೆ ಈಗಲೂ ಮುಂದುವರೆದಿದ್ದು, ಈ ವಿಚಾರವಾಗಿ ಗೃಹ ಸಚಿವರು ನಿತ್ಯವೂ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಸಂಘದ ಪರವಾಗಿ ಹೇಳಿಕೆ ನೀಡುತ್ತಿರುವವರನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ಪ್ರಿಯಾಂಕ್ ಖರ್ಗೆ, ಸಂಘ ನೋಂದಣಿಗೆ ಸಂವಿಧಾನದ ನಿಯಮಾವಳಿಗಳನ್ನು ಉಲ್ಲೇಖಿಸುತ್ತಿದ್ದಾರೆ. ಆರ್‌ಎಸ್‌ಎಸ್ ವಿರುದ್ಧದ ಪ್ರಿಯಾಂಕ್ ಖರ್ಗೆ ಅವರ ಈ ಹೋರಾಟ ಸಾಕಷ್ಟು ಚರ್ಚೆಯಾಗುತ್ತಿದೆ.

## ಒಂದೇ ಬೈಕ್ ಮೇಲೆ ಬರೋಬ್ಬರಿ 100 ಕೇಸ್: ಶೇ.50 ರಿಯಾಯಿತಿ ಬಳಸಿ 27,500 ರೂ. ದಂಡ ಪಾವತಿಸಿದ ಸವಾರ..!

• ಉದಯವಾಹಿನಿ,ಬೆಂಗಳೂರು

ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದ ಬಾಕಿ ದಂಡಗಳನ್ನು ಪಾವತಿಸಲು ರಾಜ್ಯ ಸರ್ಕಾರ ನೀಡಿರುವ ಶೇ.50ರಷ್ಟು ರಿಯಾಯಿತಿ ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ನಾಗರಿಕರೊಬ್ಬರು ತಮ್ಮ ವಾಹನದ ಮೇಲೆ ದಾಖಲಾಗಿದ್ದ 100 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಶೇ.50ರಷ್ಟು ರಿಯಾಯಿತಿ ಸೌಲಭ್ಯ ಪಡೆದು ರೂ.27,500 ದಂಡವನ್ನು ಪಾವತಿಸಿದ್ದಾರೆ. ಜೂನ್ 21ರಿಂದ ಜುಲೈ 10ರವರೆಗೆ ಬಾಕಿ ಸಂಚಾರ ದಂಡಗಳ ಮೇಲೆ ಶೇ.50 ರಿಯಾಯಿತಿ ನೀಡಲಾಗುತ್ತಿದ್ದು, ಈ ಅವಕಾಶವನ್ನು ಬಳಸಿಕೊಳ್ಳುವಂತೆ ಸಂಚಾರ ಪೊಲೀಸರು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ. ದಂಡ ಪಾವತಿಸಿದ ವಾಹನ ಸವಾರರು, ಇನ್ನು ಮುಂದೆ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದಾಗಿ ಹಾಗೂ ಸುರಕ್ಷಿತ ವಾಹನ ಚಾಲನೆಗೆ ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ.

## ಇವರೇ ನೋಡಿ ಮಾರಿಕೊಂಡವರು'; ತಮ್ಮ ವಿರುದ್ಧ ಬಂಧನ ವಾರಂಟ್ ಜಾರಿ ಕುರಿತು ನಟ ಪ್ರಕಾಶ್ ರಾಜ್ ಸ್ಪಷ್ಟನೆ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಒಂದೇ ಹೆಸರಿನಲ್ಲಿ ನಾಲ್ಕು ಮತದಾರರ ಗುರುತಿನ ಚೀಟಿಗಳನ್ನು ಪಡೆದಿದ್ದಾರೆ ಎಂಬ ಆರೋಪದ ಮೇಲೆ ಬಹುಭಾಷಾ ನಟ ಪ್ರಕಾಶ್ ರಾಜ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿದೆ ಎಂದು ಭಾನುವಾರ ಹಲವಾರು ವರದಿಗಳು ಅಂತರ್ಜಾಲದಲ್ಲಿ ಪ್ರಕಟವಾದವು.

ವರದಿಗಳ ಪ್ರಕಾರ, ದಿಲೀಪ್ ಕುಮಾರ್ ಎಂಬುವವರು ನಟ ಪ್ರಕಾಶ್ ರಾಜ್ ವಿರುದ್ಧ ನಾಲ್ಕು ಮತದಾರರ ಗುರುತಿನ ಚೀಟಿಗಳನ್ನು ಹೊಂದಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ ನಂತರ ಬೆಂಗಳೂರು ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿದೆ ಎಂದು ಹೇಳಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಸಮನ್ಸ್ ನೀಡಿದರೂ ನಟ ನ್ಯಾಯಾಲಯಕ್ಕೆ ಹಾಜರಾಗದ ಹಿನ್ನೆಲೆ ಈ ಹಿಂದೆಯೂ ಎರಡು ಬಾರಿ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿತ್ತು. ಇದರ ಹೊರತಾಗಿಯೂ ಅವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಇದೀಗ ನ್ಯಾಯಾಲಯವು ಮತ್ತೊಂದು ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ ಎಂದು ವರದಿಗಳು ಹೇಳಿವೆ. ಆದರೆ, ತಮ್ಮ ಬಗ್ಗೆ ಬಂದಿರುವ ಈ ವರದಿಗಳನ್ನು ತಳ್ಳಿಹಾಕಿರುವ ನಟ ಪ್ರಕಾಶ್ ರಾಜ್, ಸಾಮಾಜಿಕ ಮಾಧ್ಯಮದಲ್ಲಿ ಸ್ಪಷ್ಟನೆ ನೀಡಿದ್ದಾರೆ. ತಮ್ಮ ವಿರುದ್ಧ ವಾರಂಟ್ ಹೊರಡಿಸಿರುವ ಬಗ್ಗೆ ವರದಿಗಳ ಚಿತ್ರಗಳನ್ನು ಹಂಚಿಕೊಂಡಿರುವ ನಟ, 'ಸುಳ್ಳುಸುದ್ದಿ ಸೃಷ್ಟಿಸುವುದರಲ್ಲಿ ಕಾರ್ಯನಿರತರಾದ ಮಾರಿಕೊಂಡವರು. ಪಾಪ ತುಂಬಾ ನೋವಾಗಿರಬೇಕು' ಎಂದು ಬರೆದಿದ್ದಾರೆ.

ತಮ್ಮನ್ನು ತಾವು ಮಾರಿಕೊಂಡವರು ಸುಳ್ಳು ಸುದ್ದಿಗಳನ್ನು ಸೃಷ್ಟಿಸುತ್ತಿದ್ದಾರೆ ಮತ್ತು ಹರಡುತ್ತಿದ್ದಾರೆ.. ಅವರಿಗೆ ತುಂಬಾ ನೋವಾಗಿರಬೇಕು. ಆದರೆ, ಅವರನ್ನು ಬ್ಯುಸಿಯಾಗಿಟ್ಟದ್ದಕ್ಕೆ ನನಗೆ ಸಂತೋಷವಾಗಿದೆ' ಎಂದು ನಟ ಕಾಲೆಳೆದಿದ್ದು, ವರದಿಗಳು ಸುಳ್ಳು ಎಂದು ಸ್ಪಷ್ಟಪಡಿಸಿದ್ದಾರೆ.

## ಡಿ.ಕೆ.ಶಿವಕುಮಾರ್ ವಿರುದ್ಧ ಅವಹೇಳನಕಾರಿ ಪೋಸ್ಟ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಹಾಗೂ ಅವಹೇಳನಕಾರಿ ಮಾಹಿತಿ ಹಂಚಿಕೆ ಮಾಡಿದ ಆರೋಪದ ಮೇಲೆ ಕೆಲವು ಫೇಸ್‌ಬುಕ್ ಖಾತೆಗಳ ನಿರ್ವಾಹಕರ ವಿರುದ್ಧ ಬೆಂಗಳೂರು ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಜೂನ್ 20ರಂದು ವಕೀಲ ದೀಪು ಸಿ.ಆರ್. ನೀಡಿದ ದೂರಿನ ಆಧಾರದ ಮೇಲೆ ಈ ಪ್ರಕರಣ ದಾಖಲಾಗಿದೆ. ಎಫ್‌ಐಆರ್ ಪ್ರಕಾರ, ಜೂನ್ 17ರಂದು ಹೆಸರಿನ ಫೇಸ್‌ಬುಕ್ ಖಾತೆಗಳಲ್ಲಿ ಹಳೆಯ ಚಾಳಿ ಮತ್ತೆ ಆರಂಭ ಹುಟ್ಟುಗುಣ ಸುಟ್ಟಲೂ ಹೋಗಲ್ಲ ಎಂಬ ಶೀರ್ಷಿಕೆಯಡಿ ಮುಖ್ಯಮಂತ್ರಿ ವಿರುದ್ಧ ಅವಹೇಳನಕಾರಿ ಹಾಗೂ ಸುಳ್ಳು ಮಾಹಿತಿ ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 192ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಪೋಸ್ಟ್‌ಗಳ ಮೂಲ, ಅವುಗಳನ್ನು ಪ್ರಕಟಿಸಿದ ವ್ಯಕ್ತಿಗಳು ಹಾಗೂ ಅದರ ಹಿಂದಿರುವ ಉದ್ದೇಶದ ಕುರಿತು ತನಿಖೆ ಆರಂಭಿಸಿದ್ದಾರೆ. ಇದೇ ವೇಳೆ ಈ ಸಾಮಾಜಿಕ ಜಾಲತಾಣ ಖಾತೆಗಳ ನಿರ್ವಾಹಕರನ್ನು ಗುರುತಿಸುವ ಕಾರ್ಯವನ್ನು ಮುಂದುವರೆಸಿದ್ದಾರೆಂದು ತಿಳಿದುಬಂದಿದೆ.

## 20 ಲಕ್ಷ ರೂ. ದರೋಡೆ ಆರೋಪ: 'ನನಗೆ ಏನೂ ಗೊತ್ತಿಲ್ಲ' ಎಂದ ಇನ್ಸ್‌ಪೆಕ್ಟರ್; ನ್ಯಾಯಾಂಗ ಬಂಧನಕ್ಕೆ ರವಾನೆ

• ಉದಯವಾಹಿನಿ, ಬೆಂಗಳೂರು

20 ಲಕ್ಷ ರೂ. ದರೋಡೆ ಪ್ರಕರಣದಲ್ಲಿ ಬಂಧಿತರಾಗಿರುವ ಸಿಐಡಿ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವಿಚಾರಣೆ ವೇಳೆ ತಾನು ದರೋಡೆ ಪ್ರಕರಣದಲ್ಲಿ ಯಾವುದೇ ಪಾತ್ರ ಹೊಂದಿಲ್ಲ ಎಂದು ಅವರು ಪೊಲೀಸರಿಗೆ ತಿಳಿಸಿರುವುದಾಗಿ ಮೂಲಗಳು ತಿಳಿಸಿವೆ. ಸಿಐಡಿಯ ನರಹತ್ಯೆ ಮತ್ತು ಕಳ್ಳತನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಹೇಶ್ ಕನಕಗಿರಿ ಅವರನ್ನು ರಿಯಲ್ ಎಸ್ಟೇಟ್ ಏಜೆಂಟರಾದ ಕುಪೇಂದ್ರ ರೆಡ್ಡಿ ಹಾಗೂ ವಸಂತ್ ಕುಮಾರ್ ಜೊತೆಗೆ ಬಂಧಿಸಲಾಗಿತ್ತು. ಕೇರಳ ಮೂಲದ ಮೂವರು ಉದ್ಯಮಿಗಳಿಂದ ಬೆಂಗಳೂರಿನ ಹೋಟೆಲ್‌ನಲ್ಲಿ 20 ಲಕ್ಷ ರೂ. ದರೋಡೆ ನಡೆಸಿದ ಆರೋಪ ಇವರ ಮೇಲಿದೆ.

ಮಹೇಶ್ ಕನಕಗಿರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ, ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ವಿಚಾರಣೆ ವೇಳೆ, ನನಗೆ ಕುಪೇಂದ್ರ ರೆಡ್ಡಿ ಪರಿಚಯವಿದ್ದ ಕಾರಣ ಅವರೊಂದಿಗೆ ತೆರಳಿದ್ದೆ. ದರೋಡೆ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಪೊಲೀಸರು ತಿಳಿಸಿದ ಬಳಿಕವೇ ಘಟನೆಯ ಬಗ್ಗೆ ಗೊತ್ತಾಯಿತು ಎಂದು ಕನಕಗಿರಿ ಹೇಳಿರುವುದಾಗಿ ತಿಳಿದುಬಂದಿದೆ. ಇದೇ ವೇಳೆ ತನ್ನ ಪೊಲೀಸ್ ಗುರುತಿನ ಚೀಟಿ ಕಾರಿನ ಡ್ಯಾಶ್‌ಬೋರ್ಡ್‌ನಲ್ಲಿ ಇಟ್ಟಿದ್ದು, ಆರೋಪಿಗಳು ತೆಗೆದುಕೊಂಡು ದುರುಪಯೋಗಪಡಿಸಿಕೊಂಡಿದ್ದಾರೆ.

# ಪದ್ಮಶ್ರೀ ಅಂಕೇಗೌಡರ ಪುಸ್ತಕ ಮನೆಗೆ 5 ಕೋಟಿ ರೂ, 2 ಎಕರೆ ಜಮೀನು ಮಂಜೂರು

### ಅಂಕೇಗೌಡರು ಸಂಗ್ರಹಿಸಿರುವ ಅಪರೂಪದ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆ ಹಾಗೂ ಹೈಟೆಕ್ ಗ್ರಂಥಾಲಯ

• ಉದಯವಾಹಿನಿ, ಬೆಂಗಳೂರು

2026ನೇ ಸಾಲಿನ ಪದ್ಮಶ್ರೀ ಪುರಸ್ಕೃತ, ಕನ್ನಡಿಗ ಮಂಡ್ಯದ ಅಂಕೇಗೌಡರ ಕನಸಿಗೆ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಉತ್ತಮ ಉಡುಗೊರೆ ನೀಡಿದ್ದಾರೆ.

ಅಂಕೇಗೌಡರು ಸಂಗ್ರಹಿಸಿರುವ ಅಪರೂಪದ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆ ಹಾಗೂ ಹೈಟೆಕ್ ಗ್ರಂಥಾಲಯ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ 5 ಕೋಟಿ ರೂಪಾಯಿ ಅನುದಾನ ಮತ್ತು 2 ಎಕರೆ ಜಮೀನು ನೀಡಲು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಇಂದು ಮಹತ್ವದ ಆದೇಶ ಹೊರಡಿಸಿದ್ದಾರೆ.

ಇಂದು ವಿಧಾನಸೌಧದಲ್ಲಿರುವ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಪದ್ಮಶ್ರೀ ಪುರಸ್ಕೃತ ಅಂಕೇಗೌಡರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸೌಜನ್ಯದ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಅಂಕೇಗೌಡರು ತಮ್ಮ ಪುಸ್ತಕ ಮನೆಯ ಇತಿಹಾಸ ಹಾಗೂ ಅಲ್ಲಿರುವ ಲಕ್ಷಾಂತರ ಜ್ಞಾನದ ಭಂಡಾರವನ್ನು ಸಂರಕ್ಷಿಸಲು ಎದುರಿಸುತ್ತಿರುವ ಸವಾಲುಗಳನ್ನು ಮುಖ್ಯಮಂತ್ರಿಗಳ ಮುಂದೆ ವಿವರಿಸಿದರು.

ಅಂಕೇಗೌಡರ ಅಪ್ರತಿಮ ಸಾಹಿತ್ಯ ಸೇವೆ ಹಾಗೂ ಜ್ಞಾನದ ದಾಹವನ್ನು ಮನಗಂಡ ಮುಖ್ಯಮಂತ್ರಿಗಳು ತಕ್ಷಣವೇ ಅವರು ಸಲ್ಲಿಸಿದ ಮನವಿ ಪತ್ರದಲ್ಲಿ ಬೃಹತ್ ಗ್ರಂಥಾಲಯದ ಅಭಿವೃದ್ಧಿಗೆ ಅಗತ್ಯವಿರುವ ಭೂಮಿ ಮತ್ತು ಆರ್ಥಿಕ ನೆರವನ್ನು ಘೋಷಿಸಿ ಸಹಿ ಮಾಡಿ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ.

ಅಂಕೇಗೌಡರ ಭೇಟಿ, ಸೌಜನ್ಯದ ಮಾತುಕತೆಯನ್ನು ಸಿಎಂ ಡಿ ಕೆ ಶಿವಕುಮಾರ್ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ವಿಶ್ವಮಾನವ ಕುವೆಂಪು ಅವರು ತಮ್ಮ ಆತ್ಮಕಥೆ ನೆನಪಿನ ದೋಣಿಯಲ್ಲಿ ಅವರು ಮೊದಲ ಬಾರಿಗೆ ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಆದ ಅನುಭವವನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟದ್ದನ್ನು ಸ್ಮರಿಸಿ ಬರೆದಿದ್ದಾರೆ. ಕುವೆಂಪುರವರ ಜ್ಞಾನದ ಹಸಿವಿನ ವರ್ಣನೆ ಹೀಗಿದೆ.

ವಿಪುಲೈಶ್ವರ್ಯಮಯಿಯಾದ ಸಾಕ್ಷಾತ್ ತಾಯಿ ಸರಸ್ವತೀದೇವಿಯೆ, ಸೆರಗು ಓಸರಿಸಿ, ಸ್ವರ್ಣ ಕಲಶಸದೃಶ್ಯಗಳಾದ ತನ್ನ ದುಗ್ಧಪೀನ ಪಯೋಧರಗಳನ್ನು ತನ್ನ ಮುಗ್ಧ ಕವಿನಂದನ ಮುಂದೆ ಚಾಚಿ ನಿಂತಂತಿತ್ತು, 'ಬಾ ಪೀಯುಷ ಪಾನಗೈ'

ಎಂ. ಅಂಕೇಗೌಡರು ಪಾಂಡವಪುರ ತಾಲ್ಲೂಕಿನ ಚಿನಕುರಳಿಯಲ್ಲಿ ಜನಿಸಿದವರು. ಮೈಸೂರು ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಂಡಕ್ಟರ್ ಆಗಿ ಸೇರಿ, ಸಂಜೆ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ಬಳಿಕ, ಅಂಚೆ ಮತ್ತು ತೆರಪಿನ ಮೂಲಕ ಕನ್ನಡದಲ್ಲಿ ಎಂ.ಎ. ಪದವಿಯನ್ನೂ ಗಳಿಸಿದರು. ಸಕ್ಕರೆ ಕಾರ್ಖಾನೆಯಲ್ಲಿ ವೇಳಾಧಿಕಾರಿಯಾಗಿ ದುಡಿಯುತ್ತಿದ್ದಾಗ, ತಮ್ಮ


ಉದಯವಾಹಿನಿ ಚಿತ್ರ


ಉ/1272 9945/2026
22/06/2026

ಇವರಿಗೆ,
ಸನ್ಮಾನ್ಯ ಶ್ರೀ ಡಿ ಕೆ ಶಿವಕುಮಾರ್ ಅವರು
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ ಬೆಂಗಳೂರು

ಮಾನ್ಯರೇ,

[illegible]

ಸಂಬಳದ ಹೆಚ್ಚಿನ ಹಣವನ್ನು ಪುಸ್ತಕ ಕೊಳ್ಳುವುದಕ್ಕೇ ಬಳಸುತ್ತಿದ್ದರು. ಪುಸ್ತಕಗಳ ಸಂಗ್ರಹಕ್ಕಾಗಿ ತಮ್ಮ ನಿವೇಶನವನ್ನೂ ಮಾರಾಟ ಮಾಡಿದ್ದರಂತೆ. ತಮ್ಮ ಸಂಬಳದ ಬಹುಪಾಲು ಪುಸ್ತಕಗಳಿಗೇ ಮೀಸಲಿಟ್ಟು, ಪುಸ್ತಕ ಸಂಗ್ರಹಕ್ಕಾಗಿ ನಿವೇಶನವನ್ನೂ ಮಾರಿದ ಅಂಕೇಗೌಡರು, ಗ್ರಾಮೀಣ ಪ್ರದೇಶದ ಪುಸ್ತಕ ಪ್ರಿಯರಿಗೆ ಸ್ಫೂರ್ತಿಯಾಗಿದ್ದಾರೆ.

**ನಾಡಿಗೆ ಉಣಬಡಿಸುತ್ತಿರುವ ಮಹಾನ್ ಚೇತನ**

ಹೀಗೆ ಓದಿನ ಜ್ಞಾನದ ದಾಸೋಹವನ್ನು ಲಕ್ಷಾಂತರ ಪುಸ್ತಕಗಳ ಸಂಗ್ರಹದ ಮೂಲಕ ನಾಡಿಗೆ ಉಣಬಡಿಸುತ್ತಿರುವ ಮಹಾನ್ ಚೇತನ, ಪದ್ಮಶ್ರೀ ಪುರಸ್ಕೃತರು ಹಾಗೂ 'ಪುಸ್ತಕ ಮನೆಯ ರೂವಾರಿಗಳಾದ ಅಂಕೇಗೌಡ ಎಂ. ಅವರು ಇಂದು ವಿಧಾನಸೌಧದಲ್ಲಿ ನನ್ನನ್ನು ಭೇಟಿಯಾಗಿ ಸಮಾಲೋಚಿಸಿದರು. ಪುಸ್ತಕ ಲೋಕದ ಈ ಅನನ್ಯ ಸಾಧಕರೊಂದಿಗಿನ ಭೇಟಿ ಅತ್ಯಂತ ಅರ್ಥಪೂರ್ಣವಾಗಿತ್ತು ಎಂದು ಬರೆದುಕೊಂಡಿದ್ದಾರೆ.

> ಮಂಡ್ಯದ ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯಲ್ಲಿರುವ 'ಪುಸ್ತಕದ ಮನೆ'ಯನ್ನು ಸಾರ್ವಜನಿಕರ ಓದಿಗೆ ತೆರೆದಿಟ್ಟಿರುವ ಎಂ. ಅಂಕೇಗೌಡರು, ಸುಮಾರು ನಾಲ್ಕು ಲಕ್ಷ ಪುಸ್ತಕಗಳು, ನಾಣ್ಯ, ಅಂಚೆ ಚೀಟಿ ಮತ್ತು ಲಗ್ನಪತ್ರಿಕೆಗಳ ಅಪರೂಪದ ಸಂಗ್ರಹವನ್ನು ಹೊಂದಿದ್ದಾರೆ.

**20 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ರಕ್ಷಣೆ**

1 ಸುಶೀಲಮ್ಮಗೆ ಪದ್ಮ ಪ್ರಶಸ್ತಿ ಪ್ರದಾನ
2 ಯಾರು ಈ ಅಂಕೇಗೌಡರು?
3 ಬೃಹತ್ ಗ್ರಂಥಾಲಯದ ಅಭಿವೃದ್ಧಿ

## ಸಂಪುಟ ವಿಸ್ತರಣೆಗೆ 5% ಸರ್ಕಾರಿ ಸೀಟು, 95% ಪೇಮೆಂಟ್ ಸೀಟು ನಿಗದಿಯಾಗಿದೆಯಂತೆ: ಹೆಚ್‌ಡಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸಂಪುಟ ವಿಸ್ತರಣೆಗೆ 5% ಸರ್ಕಾರಿ ಸೀಟು, 95% ಮ್ಯಾನೇಜ್‌ಮೆಂಟ್ ಸೀಟು ಇದೆಯಂತೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಜೆ.ಪಿ.ಭವನದಲ್ಲಿಂದು ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ಸಂಪುಟ ವಿಸ್ತರಣೆಯಲ್ಲಿ 5% ಸರ್ಕಾರಿ ಕೋಟಾ ಹಾಗೂ 95% ಮ್ಯಾನೇಜ್‌ಮೆಂಟ್ ಸೀಟ್ ಅಂತ ಚರ್ಚೆ ಆಗುತ್ತಿದೆ. ಈ ರೀತಿ ನಾನು ಹಿಂದೆಂದೂ ಕೇಳಿರಲಿಲ್ಲ. ನನಗೆ ಇದು ಇನ್ನೂ ಅರ್ಥ ಆಗಿಲ್ಲ. ನಾನು ಇಂಜಿನಿಯರಿಂಗ್, ಮೆಡಿಕಲ್ ಸೀಟ್‌ನಲ್ಲಿ ಈ ಮೆರಿಟ್ ಸೀಟ್, ಮ್ಯಾನೇಜ್‌ಮೆಂಟ್ ಸೀಟ್ ಅಂತ ಕೇಳಿದ್ದೇನೆ. ಆದರೆ, ಈಗ ಅದು ಸಂಪುಟ ವಿಸ್ತರಣೆಯಲ್ಲೂ ಕೇಳಿ ಬರುತ್ತಿದೆ. 5% ಮೆರಿಟ್ ಸೀಟ್, ಉಳಿದ 95% ಎಲ್ಲವೂ ಪೇಮೆಂಟ್ ಸೀಟ್ ಆಗಿದೆ. ಆ ಮೂಲಕ ಲೂಟಿ ಹೊಡೆಯುತ್ತಿದ್ದಾರೆ ಎಂದರು.

**ಯಾರನ್ನಾದರೂ ಬ್ಲ್ಯಾಕ್ ಮೇಲ್ ಮಾಡುತ್ತಾರೆ:** ಬಿಜೆಪಿಯಿಂದ ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಆಣೆ ಮಾಡುವುದು ತಪ್ಪು ಅನ್ನಲ್ಲ. ಇದು ಮುಗಿದು ಹೋದ ಅಧ್ಯಾಯ ಯಾರನ್ನೂ ಬೇಕಾದರೂ ಬ್ಲ್ಯಾಕ್ ಮೇಲ್ ಮಾಡುತ್ತಾರೆ. ಇಲ್ಲಿ ಪ್ರಶ್ನೆ ಇರುವುದು ಮ್ಯಾನ್ ಪವರ್, ಮಸಲ್ ಪವರ್, ಮನಿ ಪವರ್ ಎಂದು ಟೀಕಿಸಿದರು. ಈ ಸಂಬಂಧ ಯಾರೂ ಆತಂಕಕ್ಕೆ ಒಳಗಾಗುವುದು ಬೇಡ. ಬಿಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್ ಶಾಸಕರ ಕ್ಷೇತ್ರದಲ್ಲೂ ಅಭಿವೃದ್ಧಿ ಕುಂಠಿತವಾಗಿದೆ. ಈಗಿನ ಸಿಎಂ ಬಹಳ ಧಾರಾಳವಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ರೂ ಕೊಡ್ತೇನೆ ಅಂದಿದ್ದಾರೆ. ಆ ಹಿನ್ನೆಲೆಯಲ್ಲಿ ಕ್ರಾಸ್ ವೋಟಿಂಗ್ ಆಗಿದೆ. ನಾವು ಈ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ನಾವು 2028ಕ್ಕೆ ಈ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಕೆಲಸ ಮಾಡೋಣ ಎಂದು ಸಲಹೆ ನೀಡಿದರು.

## ರಾಜ್ಯದ ಹಲವೆಡೆ ಭಾರೀ ಮಳೆ ಸಾಧ್ಯತೆ; 13 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದ ಕೆಲವೆಡೆ ಸೋಮವಾರದಿಂದ ಮೂರು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಮೂರು ಗಂಟೆಯಲ್ಲಿ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಬಿರುಗಾಳಿ-ಗುಡುಗು ಮಳೆಯ ಅಲರ್ಟ್ ನೀಡಲಾಗಿದೆ. 13 ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಒಂದೆರೆಡು ಕಡೆ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಇದೇ 24 ರಿಂದ ಉತ್ತರ ಕನ್ನಡ ಜಿಲ್ಲೆಗೂ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಒಳನಾಡಿನ ಧಾರವಾಡ, ಹಾವೇರಿ, ಬೆಳಗಾವಿ ಮತ್ತು ಕೊಪ್ಪಳ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಉಳಿದೆಡೆ ಸಾಧಾರಣ ಮಳೆಯಾಗಲಿದೆ.

ಜೂನ್ 22 ,23 ರಂದು ದಕ್ಷಿಣ ಕನ್ನಡ ಉಡುಪಿ, ಬೆಳಗಾವಿ, ಧಾರವಾಡ, ಹಾವೇರಿ, ಕೊಪ್ಪಳ ಹಾವೇರಿ, ಹಾಸನ , ಕೊಡಗು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಶಿವಮೊಗ್ಗ ವಿಜಯನಗರ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಭಾರಿ ಮಳೆಯಾಗುವ ಮುನ್ಸೂಚನೆ ಇದೆ. ಜೂನ್ 23 ಕ್ಕೆ ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಜಿಲ್ಲೆಯ ಒಂದು ಅಥವಾ ಎರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಮುಂದಿನ 24 ರಿಂದ 48 ಗಂಟೆಗಳಲ್ಲಿ ಬೆಂಗಳೂರು ನಗರದಲ್ಲಿ ಭಾಗಶಃ ಮೋಡಕವಿದ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿಯ ವೇಳೆಗೆ ಮೋಡಗಳು ದಟ್ಟವಾಗಲಿವೆ, ಹಗುರ ಮಳೆಯಾಗುವ ಮುನ್ಸೂಚನೆ ಇದೆ.

ನಗರದ ಕೆಲವು ಕಡೆಗಳಲ್ಲಿ ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

# ಬಿವೈವಿ ಸ್ಪಷ್ಟನೆಗೆ ಮನೋಹರ್ ಆಗ್ರಹ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡುವುದಕ್ಕಿಂತ ಮುಂಚಿತವಾಗಿ, ವಿಜಯೇಂದ್ರ ಅವರು ತಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಅವರ ಆಡಳಿತಾವಧಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಧರ್ಮಸ್ಥಳದ ಸನ್ನಿಧಿಯಲ್ಲಿ ಪ್ರಮಾಣ ಮಾಡಿದರೆ ಅವರನ್ನು ನಾವು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇವೆ.

ಈ ಕುರಿತು ಬಿ.ವೈ. ವಿಜಯೇಂದ್ರ ಅವರು ರಾಜ್ಯದ ಜನತೆಗೆ ಸ್ಪಷ್ಟನೆ ನೀಡಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್‌ರವರು ಒತ್ತಾಯಿಸಿದ್ದಾರೆ.

ಬಿಜೆಪಿಯ ಭ್ರಷ್ಟ ನಾಯಕರು ಧರ್ಮಸ್ಥಳವನ್ನು ರಾಜಕೀಯ ಉದ್ದೇಶಗಳಿಗೆ ಬಳಸಿಕೊಂಡು ಕಲುಷಿತಗೊಳಿಸಲು ಯತ್ನಿಸುತ್ತಿದ್ದಾರೆ.

ಇದು ಧರ್ಮಸ್ಥಳಕ್ಕೆ ಮಾಡುತ್ತಿರುವ ಅಪಚಾರವಾಗಿದೆ. ಈ ಹಿಂದೆ ಬಿ.ಎಸ್. ಯಡಿಯೂರಪ್ಪ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರು ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡುವ ವಿಷಯವನ್ನು ಪ್ರಸ್ತಾಪಿಸಿದ್ದರೂ, ನಂತರ ಇಬ್ಬರೂ ಕರ್ನಾಟಕದಲ್ಲಿ ಅಧಿಕಾರ ಕಳೆದುಕೊಂಡಿರುವುದನ್ನು ಬಿ.ವೈ. ವಿಜಯೇಂದ್ರ ಅವರು ನೆನಪಿಸಿಕೊಳ್ಳಬೇಕು ಎಂದಿದ್ದಾರೆ. ಭಾರತೀಯ ಜನತಾ ಪಕ್ಷ (ಬಿಜೆಪಿ) ಹಾಗೂ ಜನತಾ ದಳ (ಜೆಡಿಎಸ್) ಎರಡೂ ಪಕ್ಷಗಳಲ್ಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ನಡೆದಿರುವ ಕುರಿತು ನೀಡಲಾಗುತ್ತಿರುವ ಹೇಳಿಕೆಗಳು ಬಿಜೆಪಿಯ ದುರ್ಬಲತೆಯನ್ನು ಹಾಗೂ ಜೆಡಿಎಸ್ ನಾಯಕತ್ವದ ಕೊರತೆಯನ್ನು ಎತ್ತಿ ತೋರಿಸುತ್ತಿವೆ.

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ನಾಯಕತ್ವದ ವಿರುದ್ಧ ಆಂತರಿಕ ಅಸಮಾಧಾನ ವ್ಯಕ್ತವಾಗಿದ್ದು, ಪಕ್ಷದ ಶಾಸಕರು ತಮ್ಮ ವಿರೋಧವನ್ನು ಮತದಾನದ ಮೂಲಕ ವ್ಯಕ್ತಪಡಿಸಿದ್ದಾರೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರ ನಡೆ-ನುಡಿಗಳ ಬಗ್ಗೆ ಬಿಜೆಪಿ ಶಾಸಕರಲ್ಲಿ ಅಸಮಾಧಾನ ಉಂಟಾಗಿರುವುದು ಈಗ ಬಹಿರಂಗವಾಗಿದೆ.

## ಜಿಮ್ ಟ್ರೈನರ್ ಕೊಲೆ? ಕೇಸ್‌ನಲ್ಲಿ ನಾಲ್ವರು ಸೆರೆ; ಪ್ರಭಾವಿ ಉದ್ಯಮಿಯ ವಿರುದ್ಧ ಸಂಬಂಧಿಕರ ಗಂಭೀರ ಆರೋಪ

• ಉದಯವಾಹಿನಿ, ಬೆಂಗಳೂರು

ಜಿಮ್ ಟ್ರೈನರ್ ವಿಜಯ್ ಕೊಲೆ ಪ್ರಕರಣದಲ್ಲಿ ಪ್ರಭಾವಿ ಉದ್ಯಮಿಯ ಕೈವಾಡದ ವಿರುದ್ಧ ಮೃತನ ಕುಟುಂಬಸ್ಥರು ಗಂಭೀರ ಆರೋಪ ಮಾಡಿದ್ದಾರೆ. ಇನ್ನೊಂದೆಡೆ, ಪೊಲೀಸರು ಈಗಾಗಲೇ ನಾಲ್ವರನ್ನು ಬಂಧಿಸಿದ್ದು, ತನಿಖೆ ನಡೆಯುತ್ತಿದೆ.

ಕೋಲಾರದ ಮುಳಬಾಗಿಲಿನ ನಿವಾಸಿ, ಜಿಮ್ ಟ್ರೈನಲ್ ವಿಜಯ್ ಎಂಬವರನ್ನು ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹತ್ಯೆ ಮಾಡಲಾಗಿತ್ತು. ಜೂನ್10ಕ್ಕೆ ಕೊಳೆತ ಸ್ಥಿತಿಯಲ್ಲಿ ರಾಗಿಹಳ್ಳಿ ಸಮೀಪ ಮೃತದೇಹ ಪತ್ತೆಯಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ತಾಂತ್ರಿಕ ಸಾಕ್ಷ್ಯಾಧಾರಗಳ ಆಧಾರದ ಮೇಲೆ ನಾಲ್ವರು ಆರೋಪಿಗಳಾದ ಶ್ರೀರಾಮ್, ಸುಮಿತ್, ವೆಂಕಟೇಶಯ್ಯ ಹಾಗು ಬಾಬು ಎಂಬವರನ್ನು ಬಂಧಿಸಿದ್ದಾರೆ.ಈ ಪ್ರಕರಣದ ಬಗ್ಗೆ ವಿಜಯ್ ಅವರ ಸಂಬಂಧಿ, ವಕೀಲ ವಾಸುದೇವ ರೆಡ್ಡಿ ಅವರು ಪ್ರತಿಕ್ರಿಯಿಯಿಸಿ, ವಿಜಯ್ ಯಾದವ್?ಕೋಲಾರದ ಮುಳಬಾಗಿಲಿನವರು. ಸುಮಾರು ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ವಾಸವಿದ್ದು, ಜಿಮ್ ಟ್ರೈನರ್ ಆಗಿ ಕೆಲಸ ಮಾಡುತ್ತಿದ್ದರು.

# ಬ್ಲ್ಯಾಕ್ ಪಾಯಿಂಟ್‌ಗಳಲ್ಲಿ ಗಿಡ ನೆಟ್ಟು ಸ್ವಚ್ಛತೆಗೆ ಮನವಿ

• ಉದಯವಾಹಿನಿ, ಹೊಸಕೋಟೆ

ಗ್ರಾಮದಆರೋಗ್ಯ ಮತ್ತು ಸೌಂದರ್ಯವನ್ನುಕಾಪಾಡುವುದು ಪ್ರತಿಯೊಬ್ಬ ನಾಗರಿಕನಜವಾಬ್ದಾರಿ. ಸಾರ್ವಜನಿಕರು ಕಸವನ್ನುಎಲ್ಲೆಂದರಲ್ಲಿ ಬಿಸಾಡದೆ, ಪಂಚಾಯಿತಿಯ ಕಸ ಸಂಗ್ರಹಣಾ ವಾಹನಗಳಿಗೆ ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸಿ ನೀಡಬೇಕು.

ಪರಿಸರ ಸ್ವಚ್ಛತೆಗೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕು ಎಂದು ದೇವನಗುಂದಿ ಗ್ರಾಮ ಪಂಚಾಯಿತಿ ಪಿಡಿಒ ಹರೀಶ್ ಮನವಿ ಮಾಡಿದ್ದಾರೆ.

ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿ ದೇವನಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಓಬಳಾಪುರ ಕೆರೆಯ ಬದಿಯಲ್ಲಿ ಕಸ ಹಾಕದಂತೆ ಸೂಚನಾ ಫಲಕ ಹಾಗೂ ಮೆಸ್ ಅಳವಡಿಸಿ ಹಸಿರು ಸಸಿಗಳನ್ನು ನೆಟ್ಟು ನೀರುಎರೆಯುವ ಮೂಲಕ ಪರಿಸರ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವಕಾರ್ಯ ಮಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸ ಸುರಿಯುವವರ ವಿರುದ್ಧಕಠಿಣ ಕಾನೂನು ಕ್ರಮ ಮತ್ತುದಂಡ ವಿಧಿಸಲಾಗುವುದುಎಂದುದೇವನಗುಂದಿ ಗ್ರಾಮ ಪಂಚಾಯಿತಿಅಭಿವೃದ್ಧಿಅಧಿಕಾರಿ ಹರೀಶ್‌ತೀವ್ರ ಎಚ್ಚರಿಕೆ ನೀಡಿದ್ದಾರೆ. ಗ್ರಾಮದ ಸ್ವಚ್ಛತೆಯನ್ನುಕಾಪಾಡುವ ಉದ್ದೇಶದಿಂದ ಪಂಚಾಯಿತಿಯು ಹೊಸ ಮಾದರಿಯ ಪರಿಸರಸ್ನೇಹಿ ಅಭಿಯಾನಕ್ಕೆ ಚಾಲನೆ ನೀಡಿದೆ.ಕಸದ ಜಾಗಗಳು ಇನ್ನು ಮುಂದೆ ಹಸಿರು ತಾಣಗ್ರಾಮದ ಪ್ರಮುಖರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸದ ರಾಶಿಯಾಗುತ್ತಿದ್ದ ಬ್ಲಾಕ್ ಪಾಯಿಂಟ್ಗಳನ್ನು (ಕಸದ ಕೇಂದ್ರಗಳು) ಗುರುತಿಸಿ, ಅವುಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಗಿದೆ. ಆ ಜಾಗಗಳಿಗೆ ತಂತಿ ಮೆಸ್ ಅಳವಡಿಸಿ, ಸುಂದರವಾದಅಲಂಕಾರಿಕ ಹಾಗೂ ನೆರಳು ನೀಡುವ ಗಿಡಗಳನ್ನು ನೆಡಲಾಗುತ್ತಿದೆ. ಪರಿಸರ ಸ್ವಚ್ಛತೆಗೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕು

ಆ ಮೂಲಕ ಕಸ ಹಾಕುತ್ತಿದ್ದ ಜಾಗಗಳನ್ನು ಹಸಿರು ತಾಣಗಳಾಗಿ ಪರಿವರ್ತಿಸಲಾಗುತ್ತಿದೆ ಎಂದರು.


ಉದಯವಾಹಿನಿ ಚಿತ್ರ

> ಗಿಡ ನೆಟ್ಟ ಸ್ಥಳಗಳಲ್ಲಿ ಪಂಚಾಯಿತಿ ವತಿಯಿಂದಕಡ್ಡಾಯವಾಗಿ ಸೂಚನಾ ಫಲಕಗಳನ್ನು (ಬೋರ್ಡ್) ಅಳವಡಿಸಲಾಗಿದೆ. ಇಲ್ಲಿ ಕಸ ಹಾಕುವುದು ನಿಧಿಸಲಾಗಿದೆ. ನಿಯಮ ಮೀರಿ ಕಸ ಹಾಕಿದರೆ ಕಾನೂನು ರೀತ್ಯಾ ಭಾರಿದಂಡ ಅ ಎಂದು ಫಲಕಗಳಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಇದರೊಂದಿಗೆ ಸಾರ್ವಜನಿಕರು ಕಸ ಹಾಕದಂತೆ ನಿಗಾ ಇಡಲು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಆಲೋಚನೆಯೂಇದೆ. **ಪಿಡಿಒ ಹರೀಶ್**

## ಕೆಎಸ್ ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ ಶಿವಕುಮಾರ್ ಕೆಬಿ ಅಧಿಕಾರ ಸ್ವೀಕಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ವ್ಯವಸ್ಥಾಪಕ ನಿರ್ದೇಶಕರಾಗಿ ಶಿವಕುಮಾರ್ ಕೆ ಬಿ ಅವರು ಅಧಿಕಾರ ವಹಿಸಿಕೊಂಡರು. 2010 ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದ ಅವರು, ಈ ಹಿಂದೆ ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ವ್ಯವಸ್ಥಾಪಕ ನಿರ್ದೇಶಕರಾಗಿ ಸುಮಾರು ಒಂದು ವರ್ಷ ಕೆಲಸ ಮಾಡಿದ್ದರು. 2013ರ ಬ್ಯಾಚ್‌ನ ಐಎಎಸ್ ಅಧಿಕಾರಿ ಸೆಲ್ವಮಣಿ ಆರ್ ಅವರಿಂದ ಶಿವಕುಮಾರ್ ಅಧಿಕಾರ ವಹಿಸಿಕೊಂಡರು, ಅವರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದರು. ಕೆಎಸ್‌ಆರ್‌ಟಿಸಿ ಎಂಡಿಯಾಗಿ ಕೆಲಸ ನಿರ್ವಹಿಸಿದ್ದರು. ಸೆಲ್ವಮಣಿ ಅವರ ಮೊದಲು, 2012 ರ ಬ್ಯಾಚ್‌ನ ಅಧಿಕಾರಿ ಅಕ್ರಮ್ ಪಾಷಾ ಅವರು ಕೆಎಸ್‌ಆರ್‌ಟಿಸಿಯನ್ನು ಒಂದು ವರ್ಷ ಮುನ್ನಡೆಸಿದರು ಮತ್ತು ಜೂನ್ 10 ರಂದು ವರ್ಗಾವಣೆಗೊಂಡರು.

## ಸಂಚಾರ ದಂಡ ಪಾವತಿಗೆ ರಿಯಾಯಿತಿ ಆಫರ್: ಮೊದಲ ದಿನ 32,486 ಪ್ರಕರಣ ಇತ್ಯರ್ಥ, 96.73 ಲಕ್ಷ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ಬಾಕಿ ಉಳಿದಿರುವ ಸಂಚಾರ ದಂಡ (ಇ-ಚಲನ್) ಪಾವತಿಗೆ ಸರ್ಕಾರ ಘೋಷಿಸಿರುವ ಶೇಕಡಾ 50% ರಿಯಾಯಿತಿ ಅವಕಾಶದಲ್ಲಿ ಮೊದಲ ದಿನ 96.73 ಲಕ್ಷ ರೂ. ದಂಡದ ಮೊತ್ತ ಸಂಗ್ರಹಣೆಯಾಗಿದೆ. ಮೊದಲ ದಿನವಾದ ಭಾನುವಾರ ಪಾವತಿಗೆ ನಿಗದಿಯಾಗಿದ್ದ ಎಲ್ಲಾ ವಿಧಾನಗಳ ಮೂಲಕ 32,486 ಪ್ರಕರಣಗಳು ಇತ್ಯರ್ಥಗೊಂಡಿದ್ದು, 96,73,800 ರೂ. ದಂಡದ ಮೊತ್ತ ಸಂಗ್ರಹವಾಗಿದೆ. ಜೂನ್ 21ರಿಂದ ಜುಲೈ 10ರವರೆಗೆ ಈ ಅವಕಾಶ ಚಾಲ್ತಿಯಲ್ಲಿರಲಿದೆ.

ಅಂತರಾಳದಿಂದ..
EDITORIAL

# ರಕ್ಷಣ ಸ್ವಾವಲಂಬನೆ ಪಯಣದಲ್ಲಿ ಭಾರತದ ಮತ್ತೊಂದು ಮೈಲಿಗಲ್ಲು



ಕಳೆದ ಕೆಲವು ವರ್ಷಗಳಿಂದೀಚೆಗೆ ರಕ್ಷಣ ಕ್ಷೇತ್ರದಲ್ಲಿ ಸ್ವಾವಲಂಬನೆಯತ್ತ ದಾಪುಗಾಲಿಟ್ಟಿರುವ ಭಾರತ ತನ್ನ ರಕ್ಷಣ ಪಡೆಗಳ ಬತ್ತಳಿಕೆಗೆ ಒಂದೊಂದೇ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸಮರ ವಿಮಾನ ಹಾಗೂ ಸಮರ ನೌಕೆಗಳನ್ನು ಸೇರ್ಪಡೆಗೊಳಿಸುತ್ತಲೇ ಬಂದಿದೆ. ಸಂಪೂರ್ಣ ಸ್ವದೇಶಿ ನಿರ್ಮಿತ ಮೂರು ಯುದ್ಧ ನೌಕೆಗಳನ್ನು ರವಿವಾರ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಗೊಳಿಸುವ ಮೂಲಕ ಸಾಗರ ಭದ್ರತೆಗೆ ಮತ್ತಷ್ಟು ಬಲ ತುಂಬಿದ್ದಾರೆ. ಈ ಮೂರು ಅತ್ಯಾಧುನಿಕ ಸಮರ ನೌಕೆಗಳ ಸೇರ್ಪಡೆ ಕೇವಲ ಭಾರತೀಯ ನೌಕಾಪಡೆಗೆ ಮಾತ್ರವಲ್ಲದೆ ಭಾರತ ರಕ್ಷಣ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಇರಿಸಿಕೊಂಡಿರುವ ಗುರಿಯೆಡೆಗಿನ ಪಯಣದಲ್ಲಿ ಮತ್ತೊಂದು ಮಹತ್ವ ಮೈಲಿಗಲ್ಲು. ಸ್ವದೇಶಿ ತಂತ್ರಜ್ಞಾನದೊಂದಿಗೆ ದೇಶದ ಕಂಪೆನಿಗಳಿಂದಲೇ ನಿರ್ಮಾಣಗೊಂಡ ಅತ್ಯಾಧುನಿಕ ಸುಧಾರಿತ ತಂತ್ರಜ್ಞಾನವನ್ನೊಳಗೊಂಡ ಮತ್ತು ಶಕ್ತಿಶಾಲಿ ಯುದ್ಧನೌಕೆಗಳಾದ ಐಎನ್‌ಎಸ್ ದುನಾಗಿರಿ, ಐಎನ್‌ಎಸ್ ಸಂಶೋಧಕ್ ಮತ್ತು ಐಎನ್‌ಎಸ್ ಅಗ್ರಯ್ ದೇಶದ ನೌಕಾಪಡೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಕಳೆದ ಕೆಲವು ವರ್ಷಗಳಿಂದ ಅತ್ಯಾಧುನಿಕ ಯುದ್ಧ ನೌಕೆಗಳು, ಜಲಾಂತರ್ಗಾಮಿಗಳು, ಜಲ ವೈಜ್ಞಾನಿಕ ಸಮೀಕ್ಷೆಗಳನ್ನು ನಡೆಸಬಲ್ಲ ನೌಕೆಗಳ ಸಹಿತ ಹಲವಾರು ನೌಕೆಗಳು, ಸಮರ ಕಾರ್ಯಾಚರಣೆಯಲ್ಲಿ ಮಹತ್ತರ ಪಾತ್ರ ವಹಿಸುವ ಶಸ್ತ್ರಾಸ್ತ್ರ ಮತ್ತು ಸಾಧನ-ಸಲಕರಣೆಗಳನ್ನು ಸೇರ್ಪಡೆಗೊಳಿಸಿಕೊಳ್ಳುವ ಮೂಲಕ ನೌಕಾಪಡೆ ತನ್ನ ಬಲವನ್ನು ವೃದ್ಧಿಸುತ್ತಲೇ ಬಂದಿದೆ. ಸಾಗರ ವಲಯದ ಭದ್ರತೆ ಇತ್ತೀಚಿನ ವರ್ಷಗಳಲ್ಲಿ ಬಲುದೊಡ್ಡ ಸವಾಲಾಗಿ ಪರಿಣಮಿಸುತ್ತಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳಿಗೆ ತಕ್ಕಂತೆ ತನ್ನ ಶಕ್ತಿ, ಸಾಮರ್ಥ್ಯ ಹಾಗೂ ಸಮರ ಸನ್ನದ್ಧತೆಯನ್ನು ಹೆಚ್ಚಿಸಿಕೊಳ್ಳಲು ಒತ್ತು ನೀಡುತ್ತಲೇ ಬಂದಿದೆ. ಕಳೆದ ಕೆಲವು ವರ್ಷಗಳಿಂದೀಚೆಗೆ ರಕ್ಷಣ ಕ್ಷೇತ್ರದಲ್ಲಿ ಸ್ವಾವಲಂಬನೆಯತ್ತ ದಾಪುಗಾಲಿಟ್ಟಿರುವ ಭಾರತ ತನ್ನ ರಕ್ಷಣ ಪಡೆಗಳ ಬತ್ತಳಿಕೆಗೆ ಒಂದೊಂದೇ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸಮರ ವಿಮಾನ ಹಾಗೂ ಸಮರ ನೌಕೆಗಳನ್ನು ಸೇರ್ಪಡೆಗೊಳಿಸುತ್ತಲೇ ಬಂದಿದೆ. ಸಂಪೂರ್ಣ ಸ್ವದೇಶಿ ನಿರ್ಮಿತ ಮೂರು ಯುದ್ಧ ನೌಕೆಗಳನ್ನು ರವಿವಾರ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಗೊಳಿಸುವ ಮೂಲಕ ಸಾಗರ ಭದ್ರತೆಗೆ ಮತ್ತಷ್ಟು ಬಲ ತುಂಬಿದ್ದಾರೆ. ಈ ಮೂರು ಅತ್ಯಾಧುನಿಕ ಸಮರ ನೌಕೆಗಳ ಸೇರ್ಪಡೆ ಕೇವಲ ಭಾರತೀಯ ನೌಕಾಪಡೆಗೆ ಮಾತ್ರವಲ್ಲದೆ ಭಾರತ ರಕ್ಷಣ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಇರಿಸಿಕೊಂಡಿರುವ ಗುರಿಯೆಡೆಗಿನ ಪಯಣದಲ್ಲಿ ಮತ್ತೊಂದು ಮಹತ್ವ ಮೈಲಿಗಲ್ಲು.

## ದೇಶದ ನೌಕಾಪಡೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿದೆ

ಸ್ವದೇಶಿ ತಂತ್ರಜ್ಞಾನದೊಂದಿಗೆ ದೇಶದ ಕಂಪೆನಿಗಳಿಂದಲೇ ನಿರ್ಮಾಣಗೊಂಡ ಅತ್ಯಾಧುನಿಕ ಸುಧಾರಿತ ತಂತ್ರಜ್ಞಾನವನ್ನೊಳಗೊಂಡ ಮತ್ತು ಶಕ್ತಿಶಾಲಿ ಯುದ್ಧನೌಕೆಗಳಾದ ಐಎನ್‌ಎಸ್ ದುನಾಗಿರಿ, ಐಎನ್‌ಎಸ್ ಸಂಶೋಧಕ್ ಮತ್ತು ಐಎನ್‌ಎಸ್ ಅಗ್ರಯ್ ದೇಶದ ನೌಕಾಪಡೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಕಳೆದ ಕೆಲವು ವರ್ಷಗಳಿಂದ ಅತ್ಯಾಧುನಿಕ ಯುದ್ಧ ನೌಕೆಗಳು, ಜಲಾಂತರ್ಗಾಮಿಗಳು, ಜಲ ವೈಜ್ಞಾನಿಕ ಸಮೀಕ್ಷೆಗಳನ್ನು ನಡೆಸಬಲ್ಲ ನೌಕೆಗಳ ಸಹಿತ ಹಲವಾರು ನೌಕೆಗಳು, ಸಮರ ಕಾರ್ಯಾಚರಣೆಯಲ್ಲಿ ಮಹತ್ತರ ಪಾತ್ರವಹಿಸುವ ಶಸ್ತ್ರಾಸ್ತ್ರ ಮತ್ತು ಸಾಧನ-ಸಲಕರಣೆಗಳನ್ನು ಸೇರ್ಪಡೆಗೊಳಿಸಿಕೊಳ್ಳುವ ಮೂಲಕ ನೌಕಾಪಡೆ ತನ್ನ ಬಲವನ್ನು ವೃದ್ಧಿಸುತ್ತಲೇ ಬಂದಿದೆ.

ಸಾಗರ ವಲಯದ ಭದ್ರತೆ ಇತ್ತೀಚಿನ ವರ್ಷಗಳಲ್ಲಿ ಬಲುದೊಡ್ಡ ಸವಾಲಾಗಿ ಪರಿಣಮಿಸುತ್ತಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳಿಗೆ ತಕ್ಕಂತೆ ತನ್ನ ಶಕ್ತಿ, ಸಾಮರ್ಥ್ಯ ಹಾಗೂ ಸಮರ ಸನ್ನದ್ಧತೆಯನ್ನು ಹೆಚ್ಚಿಸಿಕೊಳ್ಳಲು ಒತ್ತು ನೀಡುತ್ತಲೇ ಬಂದಿದೆ.

# ರಾಮಾಯಣ



ಹನುಮಂತನು ದಶಶಿರನನ್ನು ಧಿಕ್ಕರಿಸಿ ರಾಮಮಹಿಮೆಯನ್ನು ವರ್ಣಿಸಿದುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಲಂಕಾನಗರವನ್ನು ಸುಟ್ಟು ಜಯಲಕ್ಷ್ಮೀ ಆಚಿನ ಬೆಟ್ಟದ ಮೇಲೆ ಕುಳಿತಿದ್ದ ಕಪಿರೂಪದ ಬ್ರಹ್ಮನನ್ನು ಸರ್ವಭೂತಗಳೂ ನಡುಗಿದುವು, ಕಾಲಾಗ್ನಿ ಯೆಂದು ಹನುಮನನ್ನು ಹೊಗಳಿದುವು. ಊರೆಲ್ಲ ಬೂದಿಯ ರಾಶಿಯಾಗಿ ಬಿದ್ದುದನ್ನು ನೋಡಿದ ಶಕಗ ಕೋಪವು ಈ ರೀತಿಯಲ್ಲಿ ನನ್ನನ್ನು ಅಜ್ಞಾನದಲ್ಲಿ ಮುಳಗಿಸಿಬಿಟ್ಟಿತು. ಕೋಪವನ್ನು ತಮ್ಮಲ್ಲಿಯೇ ಅಡಗಿಸಿಕೊಳ್ಳುವ ಸತ್ತುರುಷರೇ ಈ ಧರೆಯಲ್ಲಿ ಶ್ರೇಷ್ಠರಲ್ಲವೇ ರೋಷನರಕಗಳು ಅಭೇದವೆಂಬುದು ನಿಜ. ಇಂತಹ ರೋಷಕ್ಕೆ ನಾನು ವಶವಾಗಿಬಿಟ್ಟೆನಲ್ಲ, ಅಕಟ ಹಿಂದುಮುಂದು ನೋಡದೆ ಈ ನಗರವನ್ನೆಲ್ಲ ಸುಡುವ ಆತುರದಲ್ಲಿ ನನಗೆ ಧರಾನಂದನೆಯ ಕ್ಷೇಮದ ಬಗ್ಗೆ ಹೊಳೆಯದೇ ಹೋಯಿತಲ್ಲ ಸಮುದ್ರವನ್ನು ದಾಟಿದುದು, ರಾತ್ರಿ ಅಲೆದುದು ಮುಂತಾದ. ಕಷ್ಟಗಳೆಲ್ಲ ನಿಷ್ಫಲವಾಯಿತಲ್ಲ ಈ ಮಟ್ಟಿಗೆ ನನ್ನ ಬುದ್ಧಿಗೆ ಏಕೆ ಮಂಕುಕವಿಯಿತು ಎಂದು ಸೀತೆಯನ್ನು ನೆನೆದು ಕಳವಳಪಟ್ಟ ಬಾಸ ಕೆಲಸವನ್ನೆಲ್ಲ ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾಯಿತು. ಆದರೆ ಮುಖ್ಯವಾದುದಕ್ಕೇ ಹೀಗೆ ಮಾಡಿದ ಪಾತಕಿ ಹೇಗೆ ತಾನೇ ರಾಮಲಕ್ಷ್ಮಣರ ಸಧಿಗೆ ಹೋಗಲಿ ನನಗೀಗ ಉಳಿದಿರುವುದು ಸಮುದ್ರದಲ್ಲಿ ಮುಳುಗುವುದು ಅಥವಾ ಅಗ್ನಿಗೆ ಆಹುತಿಯಾಗುವುದು ಹೇಗೆ ತಾನೇ ಮುಖ ಹೊತ್ತು ಹೋಗಲಿ ಎಂದು ಹನುಮನು ಹಲುಬಿದ. ಇಡೀ ಲಂಕೆಯೇ ಬೆಂಕಿಗಾಹುತಿಯಾಗಿರುವಾಗ ಧರಣಿಜೆ ಹೇಗೆ ತಾನೇ ಜೀವದಿಂದಿರುತ್ತಾಳೆ ನನ್ನ ಕಪಿತನವು ಇಡೀ ಲೋಕಕ್ಕೇ ತಿಳಿಯುವಂತಾಯಿತು! ನನ್ನ ರೋಷವೇ ವಾಟ ಎಂದು ಪವನಜನು ಫನಿಫರಿಯಾಗೆ ಮರುಗಿದ. ಸೀತೆಯ ಸಾವಿನ ಸುದ್ದಿ ತಿಳಿದರೆ ರಾಮನು ಗತಜೀವನಾಗುತ್ತಾನೆ, ಲಕ್ಷ್ಮಣನೂ ಅವನನ್ನು ಅನುಸರಿಸುತ್ತಾನೆ ಈ ವಿಷಯ ತಿಳಿದ ಭರತನೂ ಶತ್ರುಘ್ನ ನೊಡನೆ ಜೀವವನ್ನು ಕಳೆದುಕೊಳ್ಳುತ್ತಾನೆ ಅರಮನೆಯ ಮಾತೃ ವರ್ಗದವರೆಲ್ಲ ಇಲ್ಲವಾಗುತ್ತಾರೆಪ್ರವಗತತಿಯೂ ಸಾವನ್ನಪ್ಪುತ್ತಾರೆ ನನ್ನಿಂದ ಎಮ ಅನರ್ಥವಾಗಿ ಹೋಯಿತಲ್ಲ! ಆದ್ದರಿಂದ ಈ ನಗರದ ಸಮುದ್ರತೀರದಲ್ಲಿಯೇ ನೀರು ಎಲೆ ಗಾಳಿಗಳನ್ನು ಸೇವಿಸುತ್ತ ಯುಸ್ಸನ್ನು ಕಳೆಯುತ್ತೇನೆ ಎಂದುಕೊಂಡು ನಿಟಸಿರು ಬಿಟ್ಟ ಬೆಟ್ಟದ ತುದಿಯಲ್ಲಿ ಕುಳಿತು ಈ ಪರಿಯಲ್ಲಿ ಕೊರಗುತ್ತಿದ್ದ ಮಾರುತಿಗೆ ದೇಹದಲ್ಲಿ ಶುಭ ಸೂಚನೆಗಳು ಕಾಣಿಸಿದವು. ಅಷ್ಟರಲ್ಲಿ, ಗಗನದಲ್ಲಿ ಹೋಗುತ್ತಿದ್ದ ಚಾರಣಸಮುದಾಯವು ಮರುತಸುತನ ಚರಿತೆಯನ್ನು ಹೊಗಳುತ್ತ, ಈ ಭೂಮಿಯಲ್ಲಿನ ಬುದ್ಧಿವಂತರಲ್ಲಿ ಹನುಮಂತನು ಶ್ರೇಷ್ಠ, ಲಂಕೆಯನ್ನು ಪ್ರಳಯಾಗ್ನಿಯಂತೆ ಸುಟ್ಟರೂ ಜನಕಸುತೆಯಿದ್ದಅಶೋಕವನಕ್ಕೆ ಹಾನಿಯಾಗದಂತೆ ಉಳಿಸಿದನಲ್ಲ ಎಂದು ಮಾತನಾಡಿಕೊಂಡರು. ತನಗೆ ಆದ ಶುಭ ಶಕುನಗಳ ಜೊತೆಗೆ ಚಾರಣರ ಮಾತುಗಳು ಕಿವಿಗೆ ಬಿದ್ದು, ಬೆಳಗಾಗಲುಕತ್ತಲೆ ಹರಿಯುವಂತೆ, ಅಂಜನಾಸುತನ ಚಿಂತೆ ಹರಿಯಲು ಮತ್ತೊಮ್ಮೆ ಅಶೋಕವನಕ್ಕೆ ಹೋಗಿ ನೋಡುತ್ತೇನೆ ಎಂದುಕೊಂಡು ಭರಭರನೆ ಹೊರಟ. ಆಹಾ! ವನದ ಮಧ್ಯೆ ತಾಯಿ ಸೀತೆ ಸುಖವಾಗಿದ್ದಾಳೆ ಹನುಮನಿಗೆ ದರಿದ್ರನು ನಿಧಿಯನ್ನು ಕಂಡ ಹಾಗೆ ಆಯಿತು. ಲಗುಬಗೆಯಿಂದ ಹೋಗಿ ಅವಳ ಕಾಲುಗಳಿಗೆರಗಿ ನಿಂತುಕೊಂಡ. ಸೀತೆಯು ಅಮೃತಸಮಾನವಾದ ತನ್ನ ಕಟಾಕ್ಷವನ್ನು ಬೀರುತ್ತ, ಕರುವನ್ನು ಕಂಡ ಎಳಗಂದಿಯಂತೆ ಮಾರುತಿಯನ್ನು ನೋಡಿ, 'ಮಗನೇ, ವಿಷದ ಮಡುವಿನಿಂದ ಎದ್ದು ಬಂದು ನನ್ನ ಮನಸ್ಸಿಗೆ ಮುದವನ್ನಿತ್ತೆ, ನನ್ನ ಭಾಗ್ಯದ ಬೆಳಸಿನಿಂದ ರಾಘವನಿಗೆ ಹರುಷದಾಯಕನಾದೆ ಎಂದು ಸವಿನುಡಿಗಳಿಂದ ಉಪಚರಿಸಿದಳು. ಆ ಪ್ರೀತಿಯ ಮಾತುಗಳನ್ನು ಕೇಳಿದ ಹನುಮನು ಭಕ್ತಿಯಿಂದ ಅವಳ ಪದದಾವರೆಗಳಿಗೆ ನಮಿಸಿ, ಅಮ್ಮಾ ತಾಯಿಯ ನೋಟದಿಂದಲೇ ಸೃಷ್ಟಿ ಮುಂತಾದ ಕಾರ್ಯಗಳು ನೆರವೇರುವುವು, ದುರುಳದೈತ್ಯರು ಸೊಳ್ಳೆಗಳಂತೆ ಕಾಣುತ್ತಾರೆ, ನಿನ್ನ ಪಾದಸ್ಮರಣೆಯಿಂದ ಹದಿನಾಲ್ಕು ಲೋಕಗಳ ಒಡೆತನವು ದೊರಕುತ್ತದೆ. ಅಮ್ಮಾ ಅಪ್ಪಣೆಯನ್ನು ಕೊಟ್ಟರೆ ಒಡೆಯರ. ಚರಣಗಳನ್ನು ಕಂಡು ಅವರ ಆಣತಿಯಂತೆ ಬರುತ್ತೇನೆ ನಮಸ್ಕಾರ ಪೂರ್ವಕವಾಗಿ ಕೇಳಿಕೊಂಡ ವನಸುತನನ್ನು ನೋಡಿದ. ಮಾತೆಯು, ಅಪ್ಪಾ, ಹೇಳುವುದೇನಿದೆ ನಾನಿರುವ ದುರವಸ್ಥೆಯನ್ನೆಲ್ಲ. ನೀನೇ ಕಣ್ಣಾರೆ ಕಂಡಿರುವೆ, ಮುಂದೆ ಆಗಬೇಕಾಗಿರುವುದನ್ನೂ ಸರ್ವಜ್ಞನಾದ ನೀನು ಬಲ್ಲೆ ಎಂದು ಹೇಳಿ, ಕೊಂಚ ಹೊತ್ತಿನ ನಂತರ, ದೈತ್ಯಕುಲವನ್ನೆಲ್ಲ ನಾಶಮಾಡಿ ಜಯವಂತನಾದೆ, ಭಯವಿಲ್ಲದೆ ದುರ್ದೆಶೆಗಳನ್ನೆಲ್ಲ ನೀಗಿ ರಾಮನ ಪಾದಗಳನ್ನು ಕಂಡು ನಮಸ್ಕರಿಸಿ ಮತ್ತೆ ಹದುಳದಿಂದ ಬಾ ಎಂದು ಹರಸಲು ಹನುಮನು ಭಕ್ತಿಯಿಂದ ಸುತಿಸಿ ಅಪ್ಪಣೆ ಪಡೆದು, ನಾಲ್ಕು ಹೆಜ್ಜೆಗಳನ್ನಿಟ್ಟು ಮತ್ತೆ ಹಿಂತಿರುಗಿ ಬಂದು ಆಕೆಗೆ ನಮಸ್ಕರಿಸಿ, ಶ್ರೀರಾಮಪುರದರಸನ ಅಂಘ್ರಿದರ್ಶನ ಮಾಡುವ ಆಕಾಂಕ್ಷೆಯಿಂದ ಅಂಜನಾತನಯನು ಸಂತಸದ ಹೊಳೆಯಲ್ಲಿ ತೇಲಿ, ಧರಣಿಜಾತೆಯ 'ದಿವ್ಯಮೂರ್ತಿಯನ್ನು ಹೃದಯದಲ್ಲಿಟ್ಟುಕೊಂಡು ಕಿಷ್ಕಿಂಧೆಯೆಡೆಗೆ ಸಾಗಿದ.

ಮುಂದುವರೆಯುವುದು



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# 1 ದೂರದೃಷ್ಟಿ: ಯಶಸ್ಸಿನ ದಾರಿ

ವಿದ್ಯಾರ್ಥಿ ಜೀವನದಲ್ಲಿ ಯಶಸ್ಸು ಪಡೆಯಲು ದೂರದೃಷ್ಟಿ ಬಹಳ ಅಗತ್ಯ.ದೂರದೃಷ್ಟಿ ಎಂದರೆ ಭವಿಷ್ಯದಲ್ಲಿ ಏನಾಗಬೇಕು ಎಂದು ಈಗಲೇ ಯೋಚಿಸಿ,ಅದಕ್ಕೆ ತಕ್ಕ ಯೋಜನೆ ಮಾಡಿಕೊಳ್ಳುವುದು. ಗುರಿ ಸ್ಪಷ್ಟವಿದ್ದರೆ ಮಾತ್ರ ಸರಿಯಾದ ದಾರಿಯಲ್ಲಿ ನಡೆಯಲು ಸಾಧ್ಯ. ದೂರದೃಷ್ಟಿಯುಳ್ಳ ವಿದ್ಯಾರ್ಥಿ ಸಮಯವನ್ನು ವ್ಯರ್ಥ ಮಾಡುವುದಿಲ್ಲ. ಇಂದಿನ ಒಂದು ಗಂಟೆಯ ಓದು ನಾಳಿನ ಪರೀಕ್ಷೆಗೆ ಸಹಾಯ ಮಾಡುತ್ತದೆ ಎಂದು ಅವನಿಗೆ ತಿಳಿದಿರುತ್ತದೆ. ಹಾಗಾಗಿ ಅವನು ಪ್ರತಿದಿನ ಕ್ರಮವಾಗಿ ಓದುತ್ತಾನೆ.

ಅಂತಹ ವಿದ್ಯಾರ್ಥಿಗೆ ಪರೀಕ್ಷೆಯ ಭಯ ಕಡಿಮೆ.ಏಕೆಂದರೆ ಅವನು ಮೊದಲೇ ತಯಾರಿ ಮಾಡಿಕೊಂಡಿರುತ್ತಾನೆ.ಬೆಳಿಗ್ಗೆ ಎದ್ದು ಓದುವುದು,ರಾತ್ರಿ ಕಲಿತದ್ದನ್ನು ಮತ್ತೆ ನೋಡುವುದು ಅವನ ಅಭ್ಯಾಸವಾಗಿರುತ್ತದೆ.ಇದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ,ಒತ್ತಡ ಕಡಿಮೆಯಾಗುತ್ತದೆ. ಮೊಬೈಲ್, ಟಿವಿ,ಅನಗತ್ಯ ಹರಟೆಯಿಂದ ಅವನು ದೂರವಿರುತ್ತಾನೆ.ವಿಜ್ಞಾನದ ಪ್ರಕಾರ,ಗುರಿ ಇರುವಾಗ ಮೆದುಳು ಚುರುಕಾಗಿ ಕೆಲಸ ಮಾಡುತ್ತದೆ. ಆಗ ಕಲಿಕೆ ಸುಲಭ ಮತ್ತು ಖುಷಿಯಾಗುತ್ತದೆ. ದೂರದೃಷ್ಟಿ ವಿದ್ಯಾರ್ಥಿಗೆ ಶಿಸ್ತು, ತಾಳ್ಮೆ ಮತ್ತು ಪರಿಶ್ರಮವನ್ನು ಕಲಿಸುತ್ತದೆ. ಇವುಗಳಿಂದ ಒಳ್ಳೆಯ ಅಂಕ,ಉತ್ತಮ ಉದ್ಯೋಗ ಮತ್ತು ಸಮಾಜದಲ್ಲಿ ಗೌರವ ಸಿಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ತನಗೆ ಏನಾಗಬೇಕು ಎಂಬುದನ್ನು ಮೊದಲು ನಿರ್ಧರಿಸಬೇಕು.ಆ ಗುರಿಗಾಗಿ ಪ್ರತಿದಿನ ಸ್ವಲ್ಪ ಪ್ರಯತ್ನ ಮಾಡಬೇಕು. ದೂರದೃಷ್ಟಿ ಇದ್ದರೆ ಕಷ್ಟದ ದಾರಿಯೂ ಸುಲಭವಾಗುತ್ತದೆ. ಅದು ಯಶಸ್ಸಿಗೆ ದಾರಿ ತೋರಿಸುವ ಬೆಳಕು.




# ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯರು: ವೇದಜ್ಞಾನದ ದಿವ್ಯ ಸೂರ್ಯ

ಭಾರತದ ವೈದಿಕ ಪರಂಪರೆಯಲ್ಲಿ ಅಜರಾಮರ ಸ್ಥಾನ ಪಡೆದಿರುವ ಮಹರ್ಷಿಗಳಲ್ಲಿ ಶ್ರೀಮದ್ ಯೋಗೀಶ್ವರ ಯಾಜ್ಞವಲ್ಕ್ಯರು ಅತ್ಯಂತ ಶ್ರೇಷ್ಠರು. ಶ್ರೀಮದ್ಭಾಗವತ, ಬ್ರಹ್ಮಪುರಾಣ, ಸ್ಕಂದಪುರಾಣ, ಬೃಹದಾರಣ್ಯಕೋಪನಿಷತ್ ಸೇರಿದಂತೆ ಅನೇಕ ಧರ್ಮಗ್ರಂಥಗಳಲ್ಲಿ ಅವರ ಮಹಿಮೆ ಹಾಗೂ ದಿವ್ಯ ಚರಿತ್ರೆ ಉಲ್ಲೇಖಗೊಂಡಿದೆ. ವೇದಪ್ರವರ್ತಕರು, ಬ್ರಹ್ಮಜ್ಞಾನಿಗಳು, ಯೋಗೀಶ್ವರರು ಹಾಗೂ ಧರ್ಮಶಾಸ್ತ್ರದ ಪ್ರಣೇತಾರರಾಗಿ ಅವರು ಜಗತ್ತಿನಾದ್ಯಂತ ಪೂಜ್ಯರಾಗಿದ್ದಾರೆ. ಮೂಲತಃ ಮಿಥಿಲಾ ದೇಶದವರಾಗಿದ್ದ ಶ್ರೀ ಯಾಜ್ಞವಲ್ಕ್ಯರು, ಶ್ರೀ ವೇದವ್ಯಾಸರ ಶಿಷ್ಯರಾದ ಮಹರ್ಷಿ ವೈಶಂಪಾಯನರ ಅಳಿಯಂದಿರಾಗಿದ್ದರು. ಕೇವಲ ಐದನೇ ವಯಸ್ಸಿನಲ್ಲಿಯೇ ಅವರಿಗೆ ಉಪನಯನ ಹಾಗೂ ಬ್ರಹ್ಮೋಪದೇಶ ನಡೆಯಿತು. ನಂತರ ವೈಶಂಪಾಯನರ ಗುರುಕುಲದಲ್ಲಿ ವೇದಾಧ್ಯಯನ ಮಾಡಿ ಅಪಾರ ಜ್ಞಾನ ಸಂಪಾದಿಸಿದರು.

ತಮ್ಮ ಅದ್ಭುತ ತಪೋಬಲ ಮತ್ತು ಅಚಲ ಸಾಧನೆಯ ಫಲವಾಗಿ ಸಾಕ್ಷಾತ್ ಭಗವಾನ್ ಸೂರ್ಯನಾರಾಯಣರಿಂದ ಶುಕ್ಲ ಯಜುರ್ವೇದವನ್ನು ಪಡೆದ ಮಹಾನುಭಾವರು ಯಾಜ್ಞವಲ್ಕ್ಯರು. ಆದ್ದರಿಂದಲೇ ಅವರು ಶುಕ್ಲ ಯಜುರ್ವೇದದ ಪ್ರವರ್ತಕರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಕಾತ್ಯಾಯನಿ ಹಾಗೂ ಮೈತ್ರೇಯಿ ಎಂಬ ಇಬ್ಬರು ಪತ್ನಿಯರೊಂದಿಗೆ ಆದರ್ಶ ಗೃಹಸ್ಥ ಜೀವನ ನಡೆಸಿದ ಅವರು, ಧರ್ಮ ಮತ್ತು ಜ್ಞಾನವನ್ನು ಸಮನ್ವಯಗೊಳಿಸಿದ ಮಹರ್ಷಿಗಳಾಗಿದ್ದಾರೆ.

ಮುಂದೆ ತಮ್ಮದೇ ಆದ ಗುರುಕುಲವನ್ನು ಸ್ಥಾಪಿಸಿ ಅನೇಕ ಶಿಷ್ಯರಿಗೆ ವೇದ, ಉಪನಿಷತ್ತು ಮತ್ತು ಬ್ರಹ್ಮವಿದ್ಯೆಯನ್ನು ಬೋಧಿಸಿದರು. ಅವರಿಂದ ರಚಿತವಾದ ಬೃಹದಾರಣ್ಯಕೋಪನಿಷತ್, ಈಶಾವಾಸ್ಯೋಪನಿಷತ್ ಹಾಗೂ ಜಗತ್ಪ್ರಸಿದ್ಧ ಯಾಜ್ಞವಲ್ಕ್ಯ ಸ್ಮೃತಿ ಗ್ರಂಥಗಳು ಭಾರತೀಯ ಸಂಸ್ಕೃತಿ ಮತ್ತು ಧರ್ಮಶಾಸ್ತ್ರದ ಅಮೂಲ್ಯ ಸಂಪತ್ತಾಗಿವೆ. ವಿಶೇಷವಾಗಿ ಯಾಜ್ಞವಲ್ಕ್ಯ ಸ್ಮೃತಿ ಹಿಂದೂ ಸಮಾಜದ ನ್ಯಾಯ ವ್ಯವಸ್ಥೆಗೆ ಭದ್ರ ಅಡಿಪಾಯ ಹಾಕಿದ ಗ್ರಂಥವೆಂದು ಪರಿಗಣಿಸಲಾಗಿದೆ. ಇದೇ ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಕಲ್ಯಾಣ ಚಾಲುಕ್ಯರ ಕಾಲದ ಮಹಾವಿದ್ವಾಂಸ ಶ್ರೀ ವಿಜ್ಞಾನೇಶ್ವರರು ರಚಿಸಿದ ಮಿತಾಕ್ಷರ ಗ್ರಂಥವು ಹಿಂದೂ ಕಾನೂನು ವ್ಯವಸ್ಥೆಗೆ ಮಹತ್ತರ ಕೊಡುಗೆ ನೀಡಿದೆ. ಇಂದಿಗೂ ನ್ಯಾಯ, ಧರ್ಮ ಹಾಗೂ ಸಾಮಾಜಿಕ ಮೌಲ್ಯಗಳ ವಿಚಾರದಲ್ಲಿ ಈ ಗ್ರಂಥಗಳ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಹ ಮಹಾನ್ ವೇದಜ್ಞಾನಿ, ಯೋಗೀಶ್ವರ ಹಾಗೂ ಧರ್ಮಪ್ರವರ್ತಕರಾದ ಶ್ರೀಯೋಗೀಶ್ವರ ಯಾಜ್ಞವಲ್ಕ್ಯರ ಜಯಂತ್ಯೋತ್ಸವವನ್ನು ಜ್ಯೇಷ್ಠ ಶುದ್ಧ ದಶಮಿಯ ಪ್ರಯುಕ್ತ 2026ರ ಜೂನ್ 24ರ ಬುಧವಾರ ಕಲಬುರಗಿ ನಗರದ ಸಂಗಮೇಶ್ವರ ಬಡಾವಣೆಯಲ್ಲಿರುವ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಶ್ರೀಯಾಜ್ಞವಲ್ಕ್ಯ ಭವನದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಪವಿತ್ರ ಸಂದರ್ಭದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ಸೂರ್ಯನಾರಾಯಣ ಹಾಗೂ ಮಹರ್ಷಿ ಯಾಜ್ಞವಲ್ಕ್ಯರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕು ಎಂದು ಮನವಿ ಮಾಡಿದ್ದಾರೆ. ಓಂ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯಾಯ ನಮಃ




## ವಾಸ್ತು ಪ್ರಕಾರ ಈ ಗಿಡಗಳನ್ನು ಗಿಫ್ಟ್ ಮಾಡಬೇಡಿ! ಅದೃಷ್ಟಕ್ಕಿಂತ ದುಷ್ಪರಿಣಾಮವೇ ಹೆಚ್ಚು

ಇತ್ತೀಚಿನ ವರ್ಷಗಳಲ್ಲಿ ಗಿಡಗಳನ್ನು ಉಡುಗೊರೆಯಾಗಿ ನೀಡುವ ಗ್ರೀನ್ ಗಿಫ್ಟಿಂಗ್ ಟ್ರೆಂಡ್ ಸಾಕಷ್ಟು ಜನಪ್ರಿಯವಾಗಿದೆ. ಹುಟ್ಟುಹಬ್ಬ, ಗೃಹಪ್ರವೇಶ, ವಿವಾಹ ವಾರ್ಷಿಕೋತ್ಸವ ಅಥವಾ ವಿಶೇಷ ಸಮಾರಂಭಗಳಲ್ಲಿ ಪರಿಸರ ಸ್ನೇಹಿ ಉಡುಗೊರೆಯಾಗಿ ಗಿಡಗಳನ್ನು ನೀಡುವುದು ಉತ್ತಮ ಅಭ್ಯಾಸವೆಂದು ಪರಿಗಣಿಸಲಾಗುತ್ತದೆ. ಆದರೆ ವಾಸ್ತು ಶಾಸ್ತ್ರದ ನಂಬಿಕೆಗಳ ಪ್ರಕಾರ, ಎಲ್ಲಾ ಗಿಡಗಳೂ ಉಡುಗೊರೆಗೆ ಸೂಕ್ತವಲ್ಲ. ಕೆಲವು ಗಿಡಗಳು ನಕಾರಾತ್ಮಕ ಶಕ್ತಿ, ಆರ್ಥಿಕ ಅಡಚಣೆ ಅಥವಾ ಸಂಬಂಧಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಉಂಟುಮಾಡುವ ಸಂಕೇತವೆಂದು ನಂಬಲಾಗುತ್ತದೆ. ಆದ್ದರಿಂದ ಇಂತಹ ಗಿಡಗಳನ್ನು ಉಡುಗೊರೆಯಾಗಿ ನೀಡುವುದು ಅಥವಾ ಸ್ವೀಕರಿಸುವುದನ್ನು ತಪ್ಪಿಸುವುದು ಉತ್ತಮ ಎಂದು ವಾಸ್ತು ತಜ್ಞರು ಸಲಹೆ ನೀಡುತ್ತಾರೆ. ಅಲಂಕಾರಿಕ ಉದ್ದೇಶಕ್ಕಾಗಿ ಕ್ಯಾಕ್ಟಸ್ ಮತ್ತು ವಿವಿಧ ರೀತಿಯ ಮುಳ್ಳಿನ ಗಿಡಗಳನ್ನು ಮನೆ ಹಾಗೂ ಕಚೇರಿಗಳಲ್ಲಿ ಇಡುವುದು ಸಾಮಾನ್ಯವಾಗಿದೆ. ಆದರೆ ವಾಸ್ತು ಪ್ರಕಾರ, ಮುಳ್ಳುಗಳು ಒತ್ತಡ, ಸಂಘರ್ಷ ಮತ್ತು ನಕಾರಾತ್ಮಕ ಶಕ್ತಿಯ ಪ್ರತೀಕವಾಗಿವೆ. ಇಂತಹ ಗಿಡಗಳನ್ನು ಉಡುಗೊರೆಯಾಗಿ ನೀಡಿದರೆ ಸಂಬಂಧಗಳಲ್ಲಿ ಅಸಮಾಧಾನ, ವಾದ-ವಿವಾದ ಮತ್ತು ಮಾನಸಿಕ ಅಶಾಂತಿ ಹೆಚ್ಚಾಗಬಹುದು ಎಂಬ ನಂಬಿಕೆ ಇದೆ. ಬೋನ್ಸಾಯ್ ಗಿಡಗಳು ತಮ್ಮ ವಿಶಿಷ್ಟ ಸೌಂದರ್ಯ ಮತ್ತು ಆಕರ್ಷಕ ವಿನ್ಯಾಸದಿಂದ ಜನರನ್ನು ಸೆಳೆಯುತ್ತವೆ. ಆದರೆ ಇವುಗಳನ್ನು ಸಹಜ ಬೆಳವಣಿಗೆಯನ್ನು ನಿಯಂತ್ರಿಸಿ ಚಿಕ್ಕದಾಗಿ ಬೆಳೆಸಲಾಗುತ್ತದೆ. ವಾಸ್ತು ನಂಬಿಕೆಯ ಪ್ರಕಾರ, ಬೋನ್ಸಾಯ್ ಗಿಡಗಳು ಬೆಳವಣಿಗೆಯ ಕುಂಠಿತತೆಯ ಸಂಕೇತವಾಗಿದ್ದು, ಇವುಗಳನ್ನು ಉಡುಗೊರೆಯಾಗಿ ನೀಡುವುದರಿಂದ ವೃತ್ತಿ, ವ್ಯಾಪಾರ ಅಥವಾ ಆರ್ಥಿಕ ಪ್ರಗತಿಗೆ ಅಡ್ಡಿಯಾಗಬಹುದು ಎಂದು ಹೇಳಲಾಗುತ್ತದೆ.

ಮೆಹಂದಿ ಎಲೆಗಳು ಮದುವೆ ಹಾಗೂ ಶುಭ ಸಮಾರಂಭಗಳಲ್ಲಿ ಮಹತ್ವ ಪಡೆದಿದ್ದರೂ, ಅದರ ಗಿಡವನ್ನು ಗಿಫ್ಟ್ ಮಾಡುವುದನ್ನು ವಾಸ್ತು ಒಪ್ಪುವುದಿಲ್ಲ. ಕೆಲವು ಆಧ್ಯಾತ್ಮಿಕ ನಂಬಿಕೆಗಳ ಪ್ರಕಾರ, ಈ ಗಿಡವು ನಕಾರಾತ್ಮಕ ಶಕ್ತಿಗಳನ್ನು ಹೆಚ್ಚು ಆಕರ್ಷಿಸುತ್ತದೆ ಎಂದು ಹೇಳಲಾಗುತ್ತದೆ. ಹೀಗಾಗಿ ಇದನ್ನು ಉಡುಗೊರೆಯಾಗಿ ನೀಡುವುದು ಅಥವಾ ಮನೆಯ ಪ್ರಮುಖ ಭಾಗದಲ್ಲಿ ನೆಡುವುದು ಕುಟುಂಬದ ಶಾಂತಿ ಮತ್ತು ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ನಂಬಿಕೆ ಇದೆ.

ವಾಸ್ತು ಪ್ರಕಾರ, ನಿರಂತರವಾಗಿ ಒಣಗುವ, ಹಳದಿಯಾಗುವ ಅಥವಾ ಅತಿಯಾಗಿ ಹತ್ತಿ ಹರಡುವ ಗಿಡಗಳನ್ನು ಉಡುಗೊರೆಯಾಗಿ ನೀಡುವುದು ಅಶುಭ ಎಂದು ಪರಿಗಣಿಸಲಾಗುತ್ತದೆ. ಇವು ಜೀವನದಲ್ಲಿ ಅಡೆತಡೆ, ನಿರುತ್ಸಾಹ ಮತ್ತು ನಕಾರಾತ್ಮಕತೆಯನ್ನು ಪ್ರತಿನಿಧಿಸುತ್ತವೆ ಎಂದು ನಂಬಲಾಗುತ್ತದೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಬೆಂಗಳೂರು ಕಟ್ಟಿದ ದೂರದೃಷ್ಟಿಯ ನಾಯಕ

**ಕರ್ನಾಟಕದ ಇತಿಹಾಸದಲ್ಲಿ ಅನೇಕ ರಾಜರು, ಆಡಳಿತಗಾರರು ಮತ್ತು ಸಮಾಜಮುಖಿ ನಾಯಕರು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಒಂದು ನಗರವನ್ನು ಕೇವಲ ಕಟ್ಟುವುದಷ್ಟೇ ಅಲ್ಲ, ಅದರ ಭವಿಷ್ಯವನ್ನು ಶತಮಾನಗಳಷ್ಟು ಮುಂದೆ ಯೋಚಿಸಿ ರೂಪಿಸಿದ ನಾಯಕರು ವಿರಳ. ಅಂತಹ ಮಹಾನ್ ವ್ಯಕ್ತಿತ್ವಗಳಲ್ಲಿ ನಾಡಪ್ರಭು ಕೆಂಪೇಗೌಡರು ಪ್ರಮುಖರು. ಇಂದು ಬೆಂಗಳೂರು ವಿಶ್ವದ ಗಮನ ಸೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ನಗರವಾಗಿ ಬೆಳೆದಿದ್ದರೆ, ಅದರ ಮೂಲದಲ್ಲಿ ಕೆಂಪೇಗೌಡರ ದೂರದೃಷ್ಟಿ, ಆಡಳಿತ ಕೌಶಲ್ಯ ಮತ್ತು ಅಭಿವೃದ್ಧಿಯ ಚಿಂತನೆ ಅಡಗಿದೆ.**

ಸುಮಾರು ಐದು ಶತಮಾನಗಳ ಹಿಂದೆ, ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ಕೆಂಪೇಗೌಡರು ಕೇವಲ ಒಂದು ಪಟ್ಟಣವನ್ನು ನಿರ್ಮಿಸುವ ಕನಸು ಕಂಡಿರಲಿಲ್ಲ. ಜನರ ಜೀವನ ಸುಗಮವಾಗಿರಬೇಕು, ವ್ಯಾಪಾರ ಬೆಳೆಯಬೇಕು, ನೀರಿನ ಕೊರತೆ ಉಂಟಾಗಬಾರದು ಹಾಗೂ ಭವಿಷ್ಯದ ಪೀಳಿಗೆಗಳಿಗೆ ಅನುಕೂಲವಾಗುವಂತೆ ನಗರ ಬೆಳೆಯಬೇಕು ಎಂಬ ದೂರದೃಷ್ಟಿಯನ್ನು ಹೊಂದಿದ್ದರು. ಇದೇ ಕಾರಣಕ್ಕೆ ಅವರು ನಿರ್ಮಿಸಿದ ಬೆಂಗಳೂರು ಇಂದು ಕೋಟ್ಯಂತರ ಜನರ ಜೀವನಾಧಾರವಾಗಿದೆ. ಕೆಂಪೇಗೌಡರ ಕಾಲದಲ್ಲಿ ನಗರ ನಿರ್ಮಾಣವೆಂದರೆ ಕೇವಲ ಕಟ್ಟಡಗಳನ್ನು ನಿರ್ಮಿಸುವುದಲ್ಲ.

ಜನರ ಅಗತ್ಯಗಳನ್ನು ಅರ್ಥಮಾಡಿಕೊಂಡು, ಪರಿಸರ ಮತ್ತು ಪ್ರಕೃತಿಯೊಂದಿಗೆ ಹೊಂದಿಕೊಂಡಂತೆ ಅಭಿವೃದ್ಧಿ ಸಾಧಿಸುವುದು ಮುಖ್ಯವಾಗಿತ್ತು. ಅವರು ಬೆಂಗಳೂರಿನಲ್ಲಿ ಮಾರುಕಟ್ಟೆಗಳು, ದೇವಾಲಯಗಳು, ಕೆರೆಗಳು ಮತ್ತು ರಸ್ತೆಗಳನ್ನು ನಿರ್ಮಿಸುವ ಮೂಲಕ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿದರು. ನಗರ ವಿಸ್ತರಣೆಗೆ ಮಿತಿಯನ್ನು ಸೂಚಿಸುವ ಉದ್ದೇಶದಿಂದ ನಾಲ್ಕು ದಿಕ್ಕುಗಳಲ್ಲಿ ಗೋಪುರಗಳನ್ನು ನಿರ್ಮಿಸಿದರು. ಇವು ಕೇವಲ ಕಲ್ಲಿನ ಸ್ಮಾರಕಗಳಲ್ಲ ಭವಿಷ್ಯದ ನಗರ ಯೋಜನೆಗೆ ದಿಕ್ಕು ತೋರಿಸುವ ಸಂಕೇತಗಳಾಗಿದ್ದವು.

ಇಂದಿನ ಬೆಂಗಳೂರನ್ನು ನೋಡಿದಾಗ ಕೆಂಪೇಗೌಡರ ದೂರದೃಷ್ಟಿಯ ಮಹತ್ವ ಇನ್ನಷ್ಟು ಸ್ಪಷ್ಟವಾಗುತ್ತದೆ. ವಿಶ್ವದ ಅಗ್ರಗಣ್ಯ ತಂತ್ರಜ್ಞಾನ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಮತ್ತು ಕೈಗಾರಿಕೆಗಳು ಬೆಂಗಳೂರಿನಲ್ಲಿ ನೆಲೆಸಿವೆ. ಲಕ್ಷಾಂತರ ಜನರು ಉದ್ಯೋಗಕ್ಕಾಗಿ ಬೆಂಗಳೂರನ್ನು ಅವಲಂಬಿಸಿದ್ದಾರೆ. ಇಂತಹ ಬೆಳವಣಿಗೆಗೆ ಮೂಲಭೂತ ಅಡಿಪಾಯ ಹಾಕಿದವರು ಕೆಂಪೇಗೌಡರು ಎಂಬುದು ಹೆಮ್ಮೆಯ ಸಂಗತಿ.ಆದರೆ ಮತ್ತೊಂದೆಡೆ, ಬೆಂಗಳೂರು ಇಂದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಟ್ರಾಫಿಕ್ ದಟ್ಟಣೆ, ನೀರಿನ ಕೊರತೆ, ಪರಿಸರ ಮಾಲಿನ್ಯ ಮತ್ತು ಕೆರೆಗಳ ನಾಶದಂತಹ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಈ ಸಮಸ್ಯೆಗಳನ್ನು ನೋಡಿದಾಗ ಕೆಂಪೇಗೌಡರ ಆಡಳಿತದ ಕೆಲವು ಅಂಶಗಳು ನಮಗೆ ಪಾಠವಾಗುತ್ತವೆ. ಅವರು ನಿರ್ಮಿಸಿದ ಕೆರೆಗಳು ಕೇವಲ ನೀರಿನ ಸಂಗ್ರಹಣಾ ಕೇಂದ್ರಗಳಾಗಿರಲಿಲ್ಲ ಅವು ಪರಿಸರ ಸಮತೋಲನವನ್ನು ಕಾಪಾಡುವ ಜೀವನಾಡಿಗಳಾಗಿದ್ದವು. ಇಂದಿನ ನಗರಾಭಿವೃದ್ಧಿಯಲ್ಲಿ ಆ ಚಿಂತನೆಗೆ ಆದ್ಯತೆ ನೀಡಿದ್ದರೆ ನೀರಿನ ಬಿಕ್ಕಟ್ಟು ಇಷ್ಟರ ಮಟ್ಟಿಗೆ ತೀವ್ರವಾಗುತ್ತಿರಲಿಲ್ಲ. ಕೆಂಪೇಗೌಡರ ಆಡಳಿತದ ಮತ್ತೊಂದು ವಿಶೇಷತೆ ಜನಪರತೆ.



ಜನರ ಅಗತ್ಯಗಳನ್ನು ಅರಿತು ಯೋಜನೆಗಳನ್ನು ರೂಪಿಸುವುದು ಅವರ ಆಡಳಿತದ ಮೂಲತತ್ವವಾಗಿತ್ತು. ಇಂದು ನಗರಾಭಿವೃದ್ಧಿಯ ಹೆಸರಿನಲ್ಲಿ ಅನೇಕ ಯೋಜನೆಗಳು ಜಾರಿಗೆ ಬರುತ್ತಿದ್ದರೂ, ಅವು ಜನರ ದೈನಂದಿನ ಬದುಕಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಭಿವೃದ್ಧಿ ಮತ್ತು ಜನಹಿತ ಎರಡರ ನಡುವೆ ಸಮತೋಲನ ಸಾಧಿಸುವ ಅಗತ್ಯವನ್ನು ಕೆಂಪೇಗೌಡರ ಆಡಳಿತ ನಮಗೆ ನೆನಪಿಸುತ್ತದೆ.ಯುವಜನತೆಗೆ ಕೆಂಪೇಗೌಡರ ಜೀವನ ದೊಡ್ಡ ಪಾಠವಾಗಿದೆ. ಸೀಮಿತ ಸಂಪನ್ಮೂಲಗಳಿದ್ದ ಕಾಲದಲ್ಲಿಯೇ ಅವರು ದೊಡ್ಡ ಕನಸು ಕಂಡರು. ಆ ಕನಸನ್ನು ಸಾಕಾರಗೊಳಿಸಲು ಪರಿಶ್ರಮ ಪಟ್ಟರು.

ನಾಯಕತ್ವ ಎಂದರೆ ಅಧಿಕಾರವಲ್ಲ ಜನರ ಭವಿಷ್ಯವನ್ನು ರೂಪಿಸುವ ಹೊಣೆಗಾರಿಕೆ ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿದರು. ಇಂದಿನ ಯುವಕರು ಅವರ ಜೀವನದಿಂದ ದೂರದೃಷ್ಟಿ, ಶಿಸ್ತು ಮತ್ತು ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಬೆಂಗಳೂರು ಇಂದು ವಿಶ್ವಮಟ್ಟದ ನಗರವಾಗಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಆದರೆ ಈ ಹೆಮ್ಮೆಯ ಹಿಂದೆ ನಿಂತಿರುವ ನಾಡಪ್ರಭು ಕೆಂಪೇಗೌಡರ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಅವರು ಕೇವಲ ಬೆಂಗಳೂರಿನ ನಿರ್ಮಾತೃ ಮಾತ್ರವಲ್ಲ ಅಭಿವೃದ್ಧಿಯ ಅರ್ಥವನ್ನು ಹೊಸದಾಗಿ ವ್ಯಾಖ್ಯಾನಿಸಿದ ದೂರದೃಷ್ಟಿಯ ನಾಯಕ.

ಅವರ ಕನಸು ಕೇವಲ ಒಂದು ನಗರಕ್ಕೆ ಸೀಮಿತವಾಗಿರಲಿಲ್ಲ ಜನಸ್ನೇಹಿ, ಪರಿಸರ ಸ್ನೇಹಿ ಮತ್ತು ಸುಸ್ಥಿರ ಅಭಿವೃದ್ಧಿಯ ಸಮಾಜವನ್ನು ನಿರ್ಮಿಸುವುದಾಗಿತ್ತು. ಕೆಂಪೇಗೌಡ ಜಯಂತಿಯ ಸಂದರ್ಭದಲ್ಲಿ ಅವರ ಸ್ಮರಣೆಯನ್ನು ಆಚರಿಸುವುದು ಮಾತ್ರ ಸಾಕಾಗುವುದಿಲ್ಲ.

ಅವರು ತೋರಿದ ಅಭಿವೃದ್ಧಿಯ ಮಾರ್ಗವನ್ನು ಅರ್ಥಮಾಡಿಕೊಂಡು ಅನುಸರಿಸುವುದು ನಿಜವಾದ ಗೌರವವಾಗುತ್ತದೆ. ಇಂದಿನ ಬೆಂಗಳೂರಿನ ಸಮಸ್ಯೆಗಳಿಗೆ ಪರಿಹಾರ ಹುಡುಕುವಾಗ, ಭವಿಷ್ಯದ ಕರ್ನಾಟಕವನ್ನು ರೂಪಿಸುವಾಗ ಕೆಂಪೇಗೌಡರ ದೂರದೃಷ್ಟಿ ನಮ್ಮೆಲ್ಲರಿಗೂ ದಾರಿದೀಪವಾಗಬೇಕು. ಆಗ ಮಾತ್ರ ನಾವು ಅವರನ್ನು ನಿಜ ಅರ್ಥದಲ್ಲಿ ಸ್ಮರಿಸಿದಂತಾಗುತ್ತದೆ.

# ಹೃದಯದ ಆರೋಗ್ಯ ಮಧುಮೇಹ ನಿಯಂತ್ರಣಕ್ಕೆ ಬೆಂಡೆಕಾಯಿ ಬೆಸ್ಟ್

ಮಳೆಗಾಲದಲ್ಲಿ ಆರೋಗ್ಯದ ಕುರಿತು ವಿಶೇಷ ಕಾಳಜಿ ವಹಿಸುವುದು ತುಂಬಾ ಅಗತ್ಯ. ಏಕೆಂದರೆ, ಈ ಸಂದರ್ಭದಲ್ಲಿ ಆರೋಗ್ಯದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಹಾಗಾಗಿ, ಕೆಲವು ಆಹಾರಗಳ ಸೇವನೆ ಅತ್ಯುತ್ತಮವಾದರೆ ಮತ್ತೆ ಕೆಲವು ಆಹಾರ ಸೇವನೆ ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರುತ್ತದೆ.

ಕೆಲವರು ಮಳೆಗಾಲದಲ್ಲಿ ಬೆಂಡೆಕಾಯಿ ಸೇವಿಸುವುದನ್ನು ನಿಲ್ಲಿಸಬೇಕೆಂದು ಭಾವಿಸುತ್ತಾರೆ. ಮತ್ತೆ ಕೆಲವರು ಬೆಂಡೆಕಾಯಿ ತಿನ್ನುವುದು ಸರಿಯಲ್ಲ ಎನ್ನುತ್ತಾರೆ. ಅಸಲಿಯತ್ತೇನು ಎಂಬುದನ್ನು ತಜ್ಞರಿಂದ ತಿಳಿಯೋಣ. ಪೌಷ್ಟಿಕ ತಜ್ಞರು ತಿಳಿಸುವ ಪ್ರಕಾರ, ಮಳೆಗಾಲದಲ್ಲಿ ಬೆಂಡೆಕಾಯಿ ಸೇವಿಸಬಹುದು. ಬೆಂಡೆಕಾಯಿ ಸೇವನೆ ಮಾಡುವುದು ತುಂಬಾ ಸುರಕ್ಷಿತವಾಗಿದೆ. ಈ ಋತುವಿನಲ್ಲಿ ಫ್ರೆಶ್ ಆಗಿರುವ ಬೆಂಡೆಕಾಯಿಗಳು ಕಂಡು ಬರುವುದಿಲ್ಲ. ಬೆಂಡೆಕಾಯಿ ಬೇಸಿಗೆಯಲ್ಲಿ ಅಧಿಕ ಪ್ರಮಾಣದಲ್ಲಿ ದೊರೆಯುವ ತರಕಾರಿ. ಇದರಿಂದ ಬೆಂಡೆಕಾಯಿ ಗುಣಮಟ್ಟದ ಮೇಲೆ ಕೂಡ ಪರಿಣಾಮ ಬೀರಬಹುದು. ಈ ಸಮಯದಲ್ಲಿ ಸರಿಯಾದ ಶುಚಿಗೊಳಿಸುವಿಕೆ, ಸರಿಯಾದ ಕ್ರಮದಲ್ಲಿ ಅಡುಗೆ ತಯಾರಿಸಿ ಬೆಂಡೆಕಾಯಿ ಸೇವನೆ ಮಾಡುವುದು.ಮಳೆಗಾಲದಲ್ಲಿ ಸಾಮಾನ್ಯವಾಗಿ ನಿಧಾನ ಜೀರ್ಣಕ್ರಿಯೆ, ನಿರಂತರ ತೇವಾಂಶ, ದುರ್ಬಲಗೊಂಡ ರೋಗನಿರೋಧಕ ಶಕ್ತಿ ಮುಂತಾದ ಸಮಸ್ಯೆಗಳನ್ನು ಕಾಣಬಹುದು. ಇಂತಹ ಸಮಯದಲ್ಲಿ ಬೆಂಡೆಕಾಯಿ ಸೇವನೆ ಮಾಡುವುದು ದೇಹದ ಆರೋಗ್ಯಕ್ಕೆ ಉತ್ತಮವಾಗಿದೆ. ಬೆಂಡೆಕಾಯಿಯಲ್ಲಿ ಹಲವು ಅಗತ್ಯ ಪೋಷಕಾಂಶಗಳು ಒಳಗೊಂಡಿವೆ ಎಂದು ಆರೋಗ್ಯ ತಜ್ಞರು ವಿವರಿಸುತ್ತಾರೆ. ಬೆಂಡೆಕಾಯಿಯಲ್ಲಿನ ನೈಸರ್ಗಿಕ ಜೆಲ್ ಅನ್ನು ಲೋಳೆ ಎಂದು ಕರೆಯಲಾಗುತ್ತದೆ. ಈ ಲೋಳೆಯು ದೇಹಕ್ಕೆ ತುಂಬಾ ಉಪಯುಕ್ತವಾಗಿದೆ.



ಮಳೆಗಾಲದಲ್ಲಿ ಅನೇಕರು ಕಾಣಿಸುವ ವಿವಿಧ ಚರ್ಮದ ಸಮಸ್ಯೆಗಳನ್ನು ಎದುರಿಸುತ್ತಾರೆ. ಬೆಂಡೆಕಾಯಿಯಲ್ಲಿನ ಲೋಳೆಯು ಸುಗಮ ಜೀರ್ಣಕ್ರಿಯೆಯನ್ನು ಕಾಪಾಡಿಕೊಳ್ಳುವಲ್ಲಿ ತುಂಬಾ ಒಳ್ಳೆಯದು.

ಕರುಳಿನ ಕಾರ್ಯ ಸುಧಾರಿಸಲು ಸಹಾಯ ಮಾಡುತ್ತದೆ. ಬೆಂಡೆಕಾಯಿ ದೇಹವನ್ನು ತಂಪಾಗಿಸುವ ಪರಿಣಾಮವನ್ನು ಹೊಂದಿದೆ. ವಿಶೇಷವಾಗಿ ಕಚ್ಚಾ ಬೆಂಡೆಕಾಯಿ ಬೇಸಿಗೆಗೆ ಪ್ರಯೋಜನಕಾರಿ. ವಿವಿಧ ಮಸಾಲೆಗಳೊಂದಿಗೆ ಬೇಯಿಸಿದಾಗ ಇದು ಉಷ್ಣವಾಗಬಹುದು. ಬೆಂಡೆಕಾಯಿ ಸೇವನೆಯಿಂದ ಜೀರ್ಣಕ್ರಿಯೆ, ರಕ್ತದಲ್ಲಿನ ಸಕ್ಕರೆ ನಿಯಂತ್ರಣ, ಹೃದಯದ ಆರೋಗ್ಯ, ಕಣ್ಣು ಹಾಗೂ ಚರ್ಮದ ಆರೋಗ್ಯಕ್ಕೆ ಒಳ್ಳೆಯದು. ಇದರಲ್ಲಿ ಫೈಬರ್, ವಿಟಮಿನ್ ಎ, ಸಿ, ಕೆ, ಬಿ9, ಖನಿಜಗಳು ಅಧಿಕವಾಗಿವೆ. ಬೆಂಡೆಕಾಯಿ ಕೊಲೆಸ್ಟ್ರಾಲ್ ಅನ್ನು ಹೊಂದಿರುವುದಿಲ್ಲ. ಅರ್ಧ ಕಪ್ ಬೇಯಿಸಿದ ಬೆಂಡೆಕಾಯಿಯಲ್ಲಿ 6 ಗ್ರಾಂ ಕಾರ್ಬೋಹೈಡ್ರೇಟ್‌ಗಳು, 6 ಕ್ಯಾಲೋರಿಗಳು, 2 ಗ್ರಾಂ ಫೈಬರ್, 5 ಗ್ರಾಂ ಪ್ರೋಟೀನ್, 8 ಮಿಗ್ರಾಂ ಸೋಡಿಯಂ, 8 ಎಂಸಿಜಿ ಫೋಲೇಟ್, 32 ಎಂಸಿಜಿ ವಿಟಮಿನ್ ಕೆ, 6 ಮಿಗ್ರಾಂ ಕ್ಯಾಲ್ಸಿಯಂ, 8 ಮಿಗ್ರಾಂ ಮೆಗ್ನೀಸಿಯಮ್, 13 ಮಿಗ್ರಾಂ ವಿಟಮಿನ್ ಸಿ ಹಾಗೂ 2 ಮಿಗ್ರಾಂ ಮ್ಯಾಂಗನೀಸ್ ಇರುತ್ತದೆ. ಬೆಂಡೆಕಾಯಿಯಲ್ಲಿರುವ ನಾರಿನ ಅಂಶವು ಸಕ್ಕರೆ, ಕಾರ್ಬೋಹೈಡ್ರೇಟ್‌ಗಳ ಜೀರ್ಣಕ್ರಿಯೆಯನ್ನು ನಿಧಾನಗೊಳಿಸುವ ಮೂಲಕ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ. ಇದು ಪೆಕ್ಟಿನ್‌ನಲ್ಲಿ ಸಮೃದ್ಧವಾಗಿದೆ.

ಇದು ಜೆಲಾಟಿನಸ್ ವಸ್ತುವನ್ನು ಹೋಲುವ ನಾರು. ಇದು ಕರುಳಿನಲ್ಲಿ ಪ್ರಯೋಜನಕಾರಿ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ, ಇದರಿಂದ ಮಲಬದ್ಧತೆಯಿಂದ ಬಳಲುತ್ತಿರುವವರಿಗೆ ಪ್ರಯೋಜನವಾಗುತ್ತದೆ. ಬೆಂಡೆಕಾಯಿಯು ಕೊಲೊನ್ ಕ್ಯಾನ್ಸರ್ ಅಪಾಯ ಕಡಿಮೆ ಮಾಡುತ್ತದೆ ಎಂದು ಪೌಷ್ಟಿಕ ತಜ್ಞರು ವಿವರಿಸುತ್ತಾರೆ.

# ಮಸಬಿನಾಳ ದಾಸೋಹ ವಿರಕ್ತಮಠದ ಸಿದ್ದರಾಮ ಸ್ವಾಮೀಜಿ ಅಭಿಮತ : ಕವನ ರಚಿಸುವವದು ಪ್ರತಿಭಾವಂತರಿಗೆ ಸಾಧ್ಯ

• **ಉದಯವಾಹಿನಿ, ಬಸವನಬಾಗೇವಾಡಿ :**

ಕವನ ರಚಿಸುವದು ಪ್ರತಿಭಾವಂತರಿಗೆ ಸಾಧ್ಯ. ವಚನ ಶಿಲಾಶಾಸನ ವಚನ ಮಂಟಪ ನಿರ್ಮಾಪಕರಾದ ಲಿಂ. ಚನ್ನಬಸವ ಸ್ವಾಮಿಜಿಯವರನ್ನು ಕುರಿತು ಕವನ ವಾಚಿಸಿರುವದು ಎಲ್ಲಿಲ್ಲದ ಸಂತೋಷ ಎಂದು ತಾಲ್ಲೂಕಿನ ಮಸಬಿನಾಳ ದಾಸೋಹ ವಿರಕ್ತಮಠದ ಸಿದ್ದರಾಮ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ವಚನ ಶಿಲಾಶಾಸನ ಮಂಟಪ ಇಂಗಳೇಶ್ವರದಲ್ಲಿ ಸೋಮವಾರ ಲಿಂ.ಸಿದ್ಧಲಿಂಗ ಶಿವಯೋಗಿಗಳ 92ನೇ ಜಾತ್ರಾ ಮಹೋತ್ಸವ ಹಾಗೂ ಲಿಂ.ಚನ್ನಬಸವ ಸ್ವಾಮಿಜಿಯವರ 95ನೇ ಗುರು ವಂದನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು,ಬಸವಾದಿ ಶರಣರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.


ಉದಯವಾಹಿನಿ ಚಿತ್ರ

ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿದ ಬಸವನಬಾಗೇವಾಡಿ ವಿರಕ್ತಮಠ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಕವನ ವಾಚನ ಮಾಡುವವರು ತುಂಬ ಉಪಯುಕ್ತ ಕವನಗಳನ್ನು ರಚಿಸಿ ವಾಚಿಸಿರುವದು ತುಂಬ ಪ್ರಶಂಸನೀಯ. ಬಸವಣ್ಣನವರ, ಚನ್ನಬಸವಣ್ಣನವರು,.ಅಕ್ಕಮಹಾದೇವಿ.ಮುಂತಾದದವರ ಕುರಿತು ಗುಣಮಟ್ಟದ ಕವಿತೆಗಳು ಮೂಡಿ ಬಂದಿದ್ದು ತುಂಬ ಶ್ಲಾಘನೀಯ ಕಾರ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಹೂವಿನ ಹಿಪ್ಪರಗಿ ಪತ್ರಿಮಠದ ದ್ರಾಕ್ಷಾಯಿಣಿ ಮಾತನಾಡಿ, ವಚನ ಶಿಲಾಶಾಸನ ಮಂಟಪ ಇಂದು ಬಸವಾದಿ ಶರಣರ ಕಾಯಕ ತತ್ವಗಳ ಕೇಂದ್ರವಾಗಿದೆ. ಜಿಲ್ಲಾ, ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು ಮಠಗಳೊಂದಿಗೆ ಸೇರಿ ಸಾಹಿತ್ಯವನ್ನು ಬೆಳೆಸುವ ಹಾಗೂ ಉಳಿಸುವ ಕಾರ್ಯ ಶ್ಲಾಘನೀಯ ಎಂದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ಬಿ ಮರ್ತುರ. ಕಸಾಪ ಮಾಜಿ ಅಧ್ಯಕ್ಷ ಆರ್ ಜಿ ಅಳ್ಳಗಿ ಹಾಗೂ ನಿಂಗಪ್ಪ ಬೊಮ್ಮನಳ್ಳಿ. ತಾಲ್ಲೂಕು ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ. ಮಾತನಾಡಿದರು. ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಪುರಸ್ಕೃತರಾದ ಮಡಿವಾಳಮ್ಮ ನಾಡಗೌಡ ಮಾತನಾಡಿದರು. ಕಣಕಾಲಮಠದ ಗುರುಮೂರ್ತಿ. ಚಡಚಣ ವಿರಕ್ತಮಠ. ಷಡಕ್ಷರ ಸ್ವಾಮಿಜಿ. ಪಡೆಕನೂರ ವಿರಕ್ತಮಠ ಚನ್ನ ಮಲ್ಲಿಕಾರ್ಜುನ ಸ್ವಾಮೀಜಿ,ವಡವಡಗಿ ವೀರಸಿದ್ಧ ಸ್ವಾಮೀಜಿ, ಬಾಬುರಾವ ಮಹಾರಾಜ ಹೊನವಾಡ ಉಪಸ್ಥಿತರಿದ್ದರು. ಶರಣ ಚಿಂತಕಿ ರಶ್ಮಿ ಬದ್ನೂರ ಪ್ರಾಸ್ತಾವಿಕ ಮಾತನಾಡಿದರು.

ನಾಯ್ಕೊಡಿ ಗೀತಗಾಯನ ಮಾಡಿದರು. ಕಸಾಪ ಜಿಲ್ಲಾ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಸ್ವಾಗತಿಸಿ ಗೌರವಿಸಿದರು. ಎಸ್ ಎಲ್ ಓಂಕಾರ ನಿರೂಪಿಸಿದರು. ಗಿರಿಜಾ ಸಜ್ಜನ ವಂದಿಸಿದರು.

ಕವಿಗೋಷ್ಠಿಯಲ್ಲಿ ಶಾಂತಲಾ ಪಾಟೀಲ. ರೂಪಾದ ರಜಪೂತ. ಪರವೀನ ಶೇಖ. ಸಂಗಮೇಶ ಕರೆಪ್ಪಗೋಳ. ಸುರೇಶ ಪೂಜಾರಿ. ವೈಶಾಲಿ ಬೀಳೂರ,ಸಿ ಎಲ್ ಬಿರಾದಾರ.ಮಮತಾ ಮಳಸಾವಳಗಿ. ಅಂಬಣ್ಣ ಬಡಚಿ. ಚೈತನ್ಯ ಮುದ್ದೇಬಿಹಾಳ. ರಾಹುಲ ರಜಪೂತ. ಅಂಬಿಕಾ ಕರೆಕಪ್ಪಗೋಳ. ಸುಜಾತಾ ಹ್ಯಾಳದ. ದಾನಮ್ಮ ಹೂಗಾರ ಶರಣಗೌಡ ಗೆಣ್ಣೂರ ಭಾಗವಹಿಸಿದ್ದರು.

# ಪಶ್ಚಿಮ ಘಟ್ಟದ ಸಮಸ್ಯೆಗಳ ಬಗ್ಗೆ ವೃಕ್ಷ ಲಕ್ಷ ನಿಯೋಗದಿಂದ ಸರ್ಕಾರಕ್ಕೆ ಮನವಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಸೊರಬ:**

ಪಶ್ಚಿಮ ಘಟ್ಟದ ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಸೆಳೆದ ವೃಕ್ಷಲಕ್ಷ ಆಂದೋಲನ ಮತ್ತು ಪರಿಸರ ಜಾಗೃತಿ ಟ್ರಸ್ಟ್ ಈಚೆಗೆ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ರವಾನಿಸಿತು. 'ಶರಾವತಿ ಕಣಿವೆ ಆತಂಕದಲ್ಲಿದೆ. ಇಲ್ಲಿನ ಜನತೆ, ಜೀವವೈವಿಧ್ಯವನ್ನು ಉಳಿಸಲು ಶರಾವತಿ ಪಂಪ್ ಸ್ಟೋರೇಜ್ ಯೋಜನೆಯನ್ನು ರಾಜ್ಯ ಸರ್ಕಾರ ಕೈಬಿಡಬೇಕು. ಪಶ್ಚಿಮ ಘಟ್ಟದಲ್ಲಿ ಬೇಡ್ತಿ ವರದಾ ಹಾಗೂ ಅಘನಾಶಿನಿ ವೇದಾವತಿ ನದಿ ತಿರುವು ಯೋಜನೆಗಳನ್ನು ರಾಜ್ಯ ಸರ್ಕಾರ ಕೈಬಿಡಬೇಕು. ನೀರಾವರಿ ಯೋಜನೆಗಳಿಂದ ಜನ ನಿರಾಶ್ರಿತರಾಗಿದ್ದಾರೆ.

ಲಕ್ಷಾಂತರ ಎಕರೆ ಕಾಡು ನಾಶವಾಗುವುದಾಗಿ ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಕೇಂದ್ರ ಸರ್ಕಾರ ಅಣು ವಿದ್ಯುತ್ ಯೋಜನೆಯನ್ನು ಸಾಗರ ತಾಲ್ಲೂಕಿನ ಬೇಸೂರಿನಲ್ಲಿ ಸ್ಥಾಪಿಸಲು ಮುಂದಾಗಿದ್ದು, ಈ ಯೋಜನೆಗೆ ರಾಜ್ಯ ಸರ್ಕಾರ ಅವಕಾಶ ನೀಡಬಾರದು' ಎಂದು ಆಗ್ರಹಿಸಿದರು.

'ತಾಲ್ಲೂಕಿನ ಚಂದ್ರಗುತ್ತಿ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದ್ದು, ಈ ಪ್ರದೇಶದ ಬಸ್ತಿಕೊಪ್ಪದಲ್ಲಿ ನಡೆಸುತ್ತಿರುವ ಅಕ್ರಮ ಗಣಿಗಾರಿಕೆ, ಜಿಲೆಟಿನ್ ಸ್ಫೋಟಕ್ಕೆ ಸರ್ಕಾರ ಸಂಪೂರ್ಣವಾಗಿ ಕಡಿವಾಣ ಹಾಕಬೇಕು. ನಾಲ್ಕು ವರ್ಷಗಳಿಂದ ರೈತರು ಹೋರಾಟ ನಡೆಸುತ್ತಿದ್ದು, ಆದಷ್ಟು ಬೇಗ ಕಲ್ಲು ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ವೃಕ್ಷಲಕ್ಷ ಆಂದೋಲನದ ಸಂಚಾಲಕ ಶ್ರೀಪಾದ ಬಿಚ್ಚುಗತ್ತಿ, ಪ್ರಜಾ ಟ್ರಸ್ಟ್ ಕಾರ್ಯದರ್ಶಿ ಈರೇಶಗೌಡ, ಗಂಗಾಧರಗೌಡ, ಸುಮನಾ ಮಳಲಗದ್ದೆ, ವಿನಾಯಕ ಅವಲಗೋಡು, ಮಂಜು, ರಘುಪತಿ ಬಸ್ತಿಕೊಪ್ಪ ಸೇರಿದಂತೆ ಹಲವರಿದ್ದರು.

# 'ಭವಿಷ್ಯದ ಮುಖ್ಯಮಂತ್ರಿ' ಯಾರು : ಸುಳಿವು ನೀಡಿ, ಆಶೀರ್ವದಿಸಿದ ಶ್ರೀಗಳು!

## ಡೋಳಾ ಶ್ರೀಮಠದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ನಾಡಿನ ಪ್ರಮುಖ ವೀರಶೈವ ಪೀಠಗಳಲ್ಲಿ ಒಂದಾದ ರಂಭಾಪುರಿ

• **ಉದಯವಾಹಿನಿ, ಬೀದರ್ :**

ಸಿದ್ದರಾಮಯ್ಯನವರು ಸಿಎಂ ಆಗಿದ್ದ ವೇಳೆ, ಮುಂದಿನ ಮುಖ್ಯಮಂತ್ರಿ ಯಾರು ಎನ್ನುವ ವಿಚಾರ, ಕರ್ನಾಟಕ ಕಾಂಗ್ರೆಸ್ಸಿನಲ್ಲಿ ಭಾರೀ ಚರ್ಚೆಯ ವಿಷಯವಾಗಿತ್ತು. ಡಾ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ಎಂಬಿ ಪಾಟೀಲ್ ಮುಂತಾದ

**1 : ಕರ್ನಾಟಕ ಕಾಂಗ್ರೆಸ್ಸಿಗೆ ಯಾರು ದಿಕ್ಕು**
**2 : ಹೆಸರು ಸೂಚಿಸಿದ ರಂಭಾಪುರಿ**
**3 : ಈಶ್ವರ್ ಖಂಡ್ರೆ, ಮುಂದಿನ ಸಿಎಂ**

ಹೆಸರುಗಳು ಕೇಳಿ ಬರುತ್ತಿದ್ದರೂ, ಮಂಚೂಣಿಯಲ್ಲಿ ಇದ್ದ ಹೆಸರು ಎಂದರೆ ಡಿಕೆ ಶಿವಕುಮಾರ್. ಈಗ, ಅಧಿಕಾರ ಹಸ್ತಾಂತರವಾಗಿ, ಡಿಕೆ ಶಿವಕುಮಾರ್, ಈ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಮುಂದಿನ ಎಂಟು ವರ್ಷ ನಮ್ಮದೇ ಸರ್ಕಾರ ಎಂದು ಹೇಳುತ್ತಿರುವ ಡಿಕೆ ಶಿವಕುಮಾರ್ ಅವರ ನಂತರ, ಕಾಂಗ್ರೆಸ್ಸಿನಲ್ಲಿ ಮುಖ್ಯ ಮಂತ್ರಿ ಯಾರಾಗಬಹುದು ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ, ರಂಭಾಪುರಿ ಮಠದ ಸ್ವಾಮೀಜಿಗಳು, ವೀರಶೈವ ಲಿಂಗಾಯತ ಸಮುದಾಯದ ನಾಯಕರೊಬ್ಬರ ಹೆಸರನ್ನು ಹೇಳಿದ್ದಾರೆ.

> **ಈಶ್ವರ್ ಖಂಡ್ರೆಯವರು ಮುಂದಿನ ಮುಖ್ಯಮಂತ್ರಿ ಆಗಲು ಬೀದರ್ ಜಿಲ್ಲೆಯ ಜನತೆ ಸಹಕಾರ ಬೇಕು. ಅದೇ ದೊಡ್ಡ ಕೆಲಸವೇನೂ ಅಲ್ಲ, ಭಗವಂತ ಮತ್ತು ನಾಡಿನ ಜನತೆಯ ಆಶೀರ್ವಾದದಿಂದ ಈಶ್ವರ್ ಖಂಡ್ರೆಯವರು ಸಿಎಂ ಆಗುವ ಕೆಲಸ ನಡೆಯಲಿ ಎನ್ನುವುದು ನಮ್ಮ ಹಾರೈಕೆ. ಮಾನ್ಯ ಸಚಿವರು ಒತ್ತಡದಲ್ಲಿದ್ದಾರೆ, ಈ ವಿಚಾರದ ಬಗ್ಗೆ ಹೆಚ್ಚೇನು ಹೇಳಲು ನಾನು ಬಯಸುವುದಿಲ್ಲ ಎಂದು ಹೇಳಿದ್ದಾರೆ.**
> ರಂಭಾಪುರಿ ಸಂಸ್ಥಾನದ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯರು


ಉದಯವಾಹಿನಿ ಚಿತ್ರ

ಶ್ರೀಗಳ ಪ್ರಕಾರ, ಹಾಲೀ ಪರಿಸರ ಮತ್ತು ಅರಣ್ಯ ಇಲಾಖೆಯ ಸಚಿವರಾಗಿರುವ ಈಶ್ವರ್ ಖಂಡ್ರೆಯವರ ಹೆಸರನ್ನು ಶ್ರೀಗಳು ಉಲ್ಲೇಖಿಸಿದ್ದಾರೆ.

ತಡೋಳಾ ಶ್ರೀಮಠದ - ರಾಜ್ಯದ ಪ್ರಮುಖ ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ರಾಜ್ಯದ ಪ್ರಮುಖ ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿರುವ ತಡೋಳಾ ಶ್ರೀಮಠದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಯತಿ ಪರಂಪರೆಯ 121ನೇ ಪೀಠಾಧಿ ಪತಿಗಳಾದ, ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡುತ್ತಿದ್ದರು. ಈ ವೇಳೆ, ಈಶ್ವರ್ ಖಂಡ್ರೆ, ಮುಂದಿನ ಸಿಎಂ ಎನ್ನುವ

### ಜಾಲತಾಣದಲ್ಲಿ ಚರ್ಚೆಗೆ ಗ್ರಾಸ

**ರಂಭಾಪುರಿ ಶ್ರೀಗಳ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ. ವೀರಶೈವ ಪೀಠದ ಶ್ರೀಗಳು ತಮ್ಮದೇ ಸಮುದಾಯದ ನಾಯಕರೊಬ್ಬರನ್ನು ಭವಿಷ್ಯದ ಸಿಎಂ ಎಂದು ಹೇಳಿರುವುದಕ್ಕೆ ಪರವಿರೋಧ ಚರ್ಚೆಗಳು ವ್ಯಕ್ತವಾಗುತ್ತಿದೆ. ಸಿದ್ದರಾಮಯ್ಯನವರ ಸರ್ಕಾರವಾಗಲಿ, ಡಿಕೆ ಶಿವಕುಮಾರ್ ಸರ್ಕಾರವಾಗಲಿ, ಕೊಟ್ಟ ಖಾತೆಯನ್ನು ಯಾವುದೇ ಅಪಸ್ವರ ಇಲ್ಲದೇ, ನಿಭಾಯಿಸುವ ಈಶ್ವರ್ ಖಂಡ್ರೆ ಮತ್ತು ಅವರ ಕುಟುಂಬ ಕೂಡಾ, ನಿಷ್ಟಾವಂತ ಕಾಂಗ್ರೆಸ್ ಕುಟುಂಬವಾಗಿದೆ ಎನ್ನುವ ಅಭಿಪ್ರಾಯವೂ ಮೂಡಿಬರುತ್ತಿದೆ.**

ಮಾತನ್ನಾಡಿದ್ದಾರೆ. ಶ್ರೀಗಳು ಮಾತನಾಡಿರುವ ವಿಡಿಯೋ, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಈಶ್ವರ್ ಖಂಡ್ರೆ, ಮುಂದಿನ ಸಿಎಂ ಆಗುವುದು ಪಕ್ಕಾ ಎಂದ ರಂಭಾಪುರಿ ಶ್ರೀಗಳು ಈಶ್ವರ್ ಖಂಡ್ರೆಯವರು ಈ ರಾಜ್ಯದ ಮುಖ್ಯಮಂತ್ರಿ ಆಗೇ ಆಗುತ್ತಾರೆ, ಇದರಲ್ಲಿ ಬೇರೆ ಮಾತಿಲ್ಲ. ಆದರೆ, ಈಗ ಆಗಬೇಕು, 2028ರಲ್ಲಿ ಆಗಬೇಕು ಎನ್ನುವ ತಪ್ಪು ಕಲ್ಪನೆ ಬೇಡ. ಮಾಧ್ಯಮದವರು ಕೂಡಾ, ತಪ್ಪು ಕಲ್ಪನೆಯನ್ನು ಮೂಡಿಸುವುದು ಬೇಡ. ಮುಂದಿನ ದಿನಗಳಲ್ಲಿ ಈಶ್ವರ್ ಖಂಡ್ರೆಯವರು ಮುಖ್ಯಮಂತ್ರಿ ಆಗುತ್ತಾರೆ ಎನ್ನುವ ಆತ್ಮವಿಶ್ವಾಸ ನಮಗಿದೆ ಎಂದು ರಂಭಾಪುರಿ ಮಠದ ಯತಿಗಳು ಹೇಳಿದ್ದಾರೆ. ಶ್ರೀಗಳು, ಈ ಮಾತನ್ನು ಹೇಳಿದ ಸಂದರ್ಭದಲ್ಲಿ ಈಶ್ವರ್ ಖಂಡ್ರೆ ಅಲ್ಲೇ ಉಪಸ್ಥಿತರಿದ್ದರು.

# ರೇಷನ್ ನಿಲ್ಲಿಸುವ ವದಂತಿ; ತಾಲ್ಲೂಕು ಕಚೇರಿಗೆ ಜನರ ದಾಂಗುಡಿ

• **ಉದಯವಾಹಿನಿ, ಶಿವಮೊಗ್ಗ:**

'ಜಾತಿ ಹಾಗೂ ಆದಾಯ ಪ್ರಮಾಣಪತ್ರ ಕೊಟ್ಟರೆ ಮಾತ್ರ ರೇಷನ್ ಕೊಡಲಾಗುತ್ತದೆ' ಎಂಬ ವದಂತಿ ಜಿಲ್ಲೆಯಲ್ಲಿ ಹರಡಿದ್ದು, ಸಾರ್ವಜನಿಕರು ಪ್ರಮಾಣಪತ್ರ ಪಡೆಯಲು ತಾಲ್ಲೂಕು ಕಚೇರಿಗಳಿಗೆ ದಾಂಗುಡಿ ಇಡುತ್ತಿದ್ದಾರೆ. ಇದರಿಂದ ತಹಶೀಲ್ದಾರ್ ಕಚೇರಿ ಎದುರು ಸರತಿ ಸಾಲು, ದಟ್ಟಣೆ ಹೆಚ್ಚುತ್ತಿದೆ. ಈಗ ಶೈಕ್ಷಣಿಕ ವರ್ಷದ ಆರಂಭವಾಗಿದ್ದು, ಶಾಲೆ ಕಾಲೇಜು ಸೇರ್ಪಡೆಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ತೆರಳುವ ವಿದ್ಯಾರ್ಥಿಗಳಿಗೆ ಇದರಿಂದ ತೀವ್ರ ತೊಂದರೆ ಆಗಿದೆ. ಇನ್ನೊಂದೆಡೆ 'ಮಧ್ಯವರ್ತಿ'ಗಳಿಗೆ ಇದು ಹಬ್ಬವಾಗಿ ಪರಿಣಮಿಸಿದೆ.

ಆಹಾರ ಭದ್ರತಾ ಯೋಜನೆಯಡಿ ಪಡಿತರ ಸವಲತ್ತು ಪಡೆಯುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದ ನೈಜ ಫಲಾನುಭವಿಗಳ ಮಾಹಿತಿ ಪಡೆಯಲು ರಾಜ್ಯ ಸರ್ಕಾರ ಮುಂದಾಗಿದೆ. ಅದಕ್ಕೆ ಪೂರಕವಾಗಿ ಪರಿಶಿಷ್ಟ ಸಮುದಾಯಗಳಿಗೆ ಸೇರಿದ ಫಲಾನುಭವಿಗಳ ಜಾತಿ ಪ್ರಮಾಣ ಪತ್ರ ಪಡೆಯುವಂತೆ


ಉದಯವಾಹಿನಿ ಚಿತ್ರ

ಆಹಾರ ಇಲಾಖೆ ಮೂಲಕ ಸುತ್ತೋಲೆ ಹೊರಡಿಸಿದೆ.

ಆದರೆ ಇದಕ್ಕೆ ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ. ಜೊತೆಗೆ ರೇಷನ್ ಸ್ಥಗಿತಗೊಳಿಸುವ ಯಾವುದೇ ನಿಬಂಧನೆಯೂ ಇಲ್ಲ. ಆದರೆ ಕೆಲವು ನ್ಯಾಯಬೆಲೆ ಅಂಗಡಿಯವರು ಸರ್ಕಾರದ ಈ ಸುತ್ತೋಲೆ ಮುಂದಿಟ್ಟುಕೊಂಡು ರೇಷನ್ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಜೊತೆಗೆ ಕಿಡಿಗೇಡಿಗಳು ಹರಡಿಸಿರುವ ವದಂತಿಯೂ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಹೀಗಾಗಿ ಜಾತಿ, ಆದಾಯ ಪ್ರಮಾಣಪತ್ರ ಪಡೆಯಲು ತಾಲ್ಲೂಕು ಕಚೇರಿಗಳಿಗೆ ಬರುತ್ತಿದ್ದಾರೆ.

**ತಾಲ್ಲೂಕು ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಮತ್ತು ಭ್ರಷ್ಟ ಅಧಿಕಾರಿಗಳಿಗೆ ಲಗಾಮು ಹಾಕಲು ಜಿಲ್ಲಾಧಿಕಾರಿ ಮುಂದಾಗಬೇಕು. ಆಹಾರ ಇಲಾಖೆಯಿಂದ ಆಗಿರುವ ಗೊಂದಲಗಳನ್ನು ನಿವಾರಿಸಲು ತಹಶೀಲ್ದಾರ್ ಕಚೇರಿಯಲ್ಲಿ ಬೋರ್ಡ್ ಹಾಕಬೇಕು ಎಂದು ಮನವಿ ಮಾಡಿದರು.**

'ಕೂಲಿ ಕೆಲಸ ಬಿಟ್ಟು ಜಾತಿ ಪ್ರಮಾಣಪತ್ರ ಪಡೆಯಲು ವಾರಗಟ್ಟಲೇ ಕಚೇರಿಗಳಿಗೆ ಅಲೆಯಬೇಕಿರುವುದರಿಂದ ಬಡವರು ತೊಂದರೆಗೆ ಸಿಲುಕಿದ್ದಾರೆ.

ಮತ್ತೊಂದೆಡೆ ನಕಲಿ ಕಾರ್ಡ್ ಹೊಂದಿರುವವರು ಭ್ರಷ್ಟ ಅಧಿಕಾರಿಗಳಿಗೆ ಹಣ ಕೊಟ್ಟು ಸುಲಭವಾಗಿ ಪ್ರಮಾಣ ಪತ್ರಗಳನ್ನು ಪಡೆಯುತ್ತಿದ್ದಾರೆ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ದೇವೇಂದ್ರಪ್ಪ ಹೇಳುತ್ತಾರೆ. ಜನರ ಈ ಸಂಕಷ್ಟ ಮಧ್ಯವರ್ತಿಗಳಿಗೆ ಲಾಭವಾಗಿದೆ. ತುರ್ತಾಗಿ ಪ್ರಮಾಣಪತ್ರ ಕೊಡಿಸಲು 4,000 ರಿಂದ 5,000 ನಿಗದಿಪಡಿಸಲಾಗಿದೆ. ಇದರಲ್ಲಿ ತಾಲ್ಲೂಕು ಕಚೇರಿಗಳ ಕೆಲವು ಸಿಬ್ಬಂದಿಯೂ ಭಾಗಿಯಾಗಿದ್ದಾರೆ ಎಂದು ಆರೋಪಿದರು.

# ಶರಣರ ಅವಹೇಳನ ಗೈದವರಿಗೆ ಬಸವಕಲ್ಯಾಣ ಪ್ರವೇಶವಿಲ್ಲ

• **ಉದಯವಾಹಿನಿ, ಔರಾದ್:**

'ಬಸವಣ್ಣ ಹಾಗೂ ಬಸವಾದಿ ಶಿವಶರಣರನ್ನು ಅವಹೇಳನ ಮಾಡಿದವರನ್ನು ಬಸವಕಲ್ಯಾಣಕ್ಕೆ ಪ್ರವೇಶ ಮಾಡಲು ಅವಕಾಶ ಕೊಡುವುದಿಲ್ಲ' ಎಂದು ಭಾಲ್ಕಿ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಅನುಭವ ಮಂಟಪದಲ್ಲಿ ನಡೆದ ಬಸವ ಭಕ್ತರ ಸಭೆಯಲ್ಲಿ ಜೂ.28ರಂದು ಕನ್ನೇರಿ ಸ್ವಾಮೀಜಿ ವಿರುದ್ಧ ಪ್ರತಿಭಟನೆಯ ಭಿತ್ತಿಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.ನಾವು ಹಿಂದೂ ಸಮಾವೇಶಕ್ಕೆ ವಿರೋಧಿಗಳಲ್ಲ. ಆದರೆ, ಬಸವಣ್ಣನ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಕೊಲ್ಲಾಪುರದ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗೆ ಕಲ್ಯಾಣ ನಾಡಿನಲ್ಲಿ ಅವಕಾಶ ಕೊಡುವುದಿಲ್ಲ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕರಾದ ಶಿವಾನಂದ ಸ್ವಾಮೀಜಿ, ಪ್ರಭುಲಿಂಗ ಮಹಾಸ್ವಾಮೀಜಿ, ಅನಿಲ ಮಹಾರಾಜರು, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜ ಧನ್ನೂರ, ಶರಣಪ್ಪ ನೌಬಾದ ಸೇರಿದಂತೆ ಅನೇಕ ಬಸವ ಭಕ್ತರು ಹಾಜರಿದ್ದರು.

# ನಿರಾಶ್ರಿತರ ಕೇಂದ್ರ ಸೇರಿದವರ ಬದುಕು ದುಸ್ತರ

• **ಉದಯವಾಹಿನಿ ರಾಯಚೂರು:**

ಕುಟುಂಬದಿಂದ ಪರಿತ್ಯಕ್ತರಾದವರು, ಮಾನಸಿಕ ಹಾಗೂ ದೈಹಿಕ ಅಶಕ್ತರು, ಬದುಕಿನ ದಿಕ್ಕು ಕಳೆದುಕೊಂಡು ಆಶ್ರಯಕ್ಕಾಗಿ ಬಂದಿರುವ ನಿರಾಶ್ರಿತರಿಗೆ ಆಸರೆಯಾಗಬೇಕಿದ್ದ ರಾಯಚೂರಿನ ನಿರಾಶ್ರಿತರ ಪರಿಹಾರ ಕೇಂದ್ರವೇ ಇಂದು ನಿರ್ಲಕ್ಷ್ಯಕ್ಕೆ ಈಡಾಗಿದೆ.

ಸಮಾಜದ ಮುಖ್ಯವಾಹಿನಿಯಿಂದ ದೂರವಾದ ಜನರಿಗೆ ನೆಮ್ಮದಿಯ ಬದುಕು ಕಲ್ಪಿಸಬೇಕಾದ ಕೇಂದ್ರದಲ್ಲಿ ಹಲವು ಮೂಲಭೂತ ಸಮಸ್ಯೆಗಳು ತಲೆದೋರಿವೆ. ಕೇಂದ್ರದಲ್ಲಿ ಆಶ್ರಯ ಪಡೆದಿರುವವರಲ್ಲಿ ವೃದ್ಧರು, ಅನಾಥರು, ಮಾನಸಿಕ ಅಸ್ವಸ್ಥರು ಹಾಗೂ ವಿವಿಧ ಕಾರಣಗಳಿಂದ ಕುಟುಂಬದಿಂದ ದೂರವಾದವರು ಸೇರಿದ್ದಾರೆ.

ಆದರೆ ದೈಹಿಕವಾಗಿ ಸದೃಢರಾಗಿರುವ ಮತ್ತು ಮಾನಸಿಕವಾಗಿ ಸ್ಥಿರವಾಗಿರುವ ಕೆಲ ನಿರಾಶ್ರಿತರನ್ನೇ ಸಿಬ್ಬಂದಿ ನಿರ್ವಹಿಸಬೇಕಾದ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎನ್ನುವ ಆರೋಪಗಳು ಕೇಳಿಬಂದಿವೆ.ನಿರಾಶ್ರಿತರ ಕೇಂದ್ರದಲ್ಲಿ 250 ಪುರುಷ ಮತ್ತು ಮಹಿಳೆಯರಿದ್ದಾರೆ. ದಾಖಲೆಗಳ ಪ್ರಕಾರ 25 ಸಿಬ್ಬಂದಿ ಹಾಗೂ ಹೆಚ್ಚುವರಿ ವಾರ್ಡನ್‌ಗಳನ್ನು ನಿಯೋಜಿಸಲಾಗಿದೆ.

# ಅರಣೀಕರಣಕ್ಕಾಗಿ ಪ್ರದೇಶ ವಿಸ್ತರಣೆಗಾಗಿ ಅರಣ್ಯ 2.85 ಲಕ್ಷ ಸಸಿ ಬೆಳೆಸುವ ಗುರಿ

• **ಉದಯವಾಹಿನಿ ಯಾದಗಿರಿ:**

ಜಿಲ್ಲೆಯಲ್ಲಿ ಅರಣೀಕರಣ ಪ್ರದೇಶ ವಿಸ್ತರಣೆಗಾಗಿ ಅರಣ್ಯ ಇಲಾಖೆಯು ಪ್ರಸಕ್ತ ವರ್ಷದಲ್ಲಿ 2.85 ಲಕ್ಷ ಸಸಿಗಳನ್ನು ಬೆಳೆಸುವ ಗುರಿ ಹಾಕಿಕೊಂಡಿದೆ. ರಸ್ತೆಯ ಬದಿ, ಗೋಮಾಳ, ಸರ್ಕಾರಿ ಭೂಮಿಯಲ್ಲಿ ಕೂಲಿ ಕಾರ್ಮಿಕರಿಂದ ಸಸಿಗಳನ್ನು ನಾಟಿ ಮಾಡಿಸುವ ಕಾರ್ಯವೂ ಭರದಿಂದ ಸಾಗಿದೆ. ಜೊತೆಗೆ ವಿತರಣೆಗೆ ಸಿದ್ಧವಾಗಿರುವ ಲಕ್ಷಾಂತರ ಸಸಿಗಳು ಸಸ್ಯಕ್ಷೇತ್ರದಲ್ಲಿ ನಳನಳಿಸುತ್ತಿವೆ. ಜಿಲ್ಲೆಯಲ್ಲಿನ ಒಟ್ಟಾರೆ ಭೂ ಪ್ರದೇಶ ಪೈಕಿ ಶೇ 6.54ರಷ್ಟು ಅಂದರೆ, 33,773 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ವ್ಯಾಪಿಸಿಕೊಂಡಿದೆ. 11,755 ಹೆಕ್ಟೇರ್ ಕಾಯಂ ಗೋಮಾಳ ಹಾಗೂ 772 ಹೆಕ್ಟೇರ್ ಪ್ರದೇಶದಲ್ಲಿ ವೃಕ್ಷ ಮತ್ತು ತೋಪು ಹಬ್ಬಿಕೊಂಡಿದೆ. ಇದನ್ನು ಇನ್ನಷ್ಟು ವಿಸ್ತರಣೆ ಮಾಡಲು ಜಿಲ್ಲೆಯ ವಾತಾವರಣ ಹಾಗೂ ಮಣ್ಣಿಗೆ ಹೊಂದಿಕೊಂಡು ಬೆಳೆಯುವಂತಹ ಬೇವು, ಆಲ, ಮಹಾಘನಿ, ಹೊಂಗೆಯಂತಹ ನಾನಾ ಜಾತಿಯ, ನಾನಾ ಎತ್ತರದ ಗಿಡಗಳನ್ನು ಬೆಳೆಸಲಾಗಿದೆ.

ಜೂನ್ ಆರಂಭದಲ್ಲಿ ವರ್ಷಧಾರೆ ಬೀಳುತ್ತಿದ್ದಂತೆ ಸಸಿ


ಉದಯವಾಹಿನಿ ಚಿತ್ರ

ನೆಡುವ ಕಾರ್ಯ ಆರಂಭವಾಗಿದೆ. ಆಗಸ್ಟ್ ಅಂತ್ಯದ ವರೆಗೂ ಸಾರ್ವಜನಿಕರಿಗೆ, ಸಂಘ ಸಂಸ್ಥೆಗಳಿಗೆ, ಸರ್ಕಾರಿ ಕಚೇರಿಗಳಿಗೆ, ನಿಗಮಗಳಿಗೆ, ಶಾಲಾ- ಕಾಲೇಜುಗಳಿಗೆ ಸಸಿಗಳನ್ನು ವಿತರಿಸಿ, ನೆಡುವ ಕಾರ್ಯವೂ ಜರುಗುತ್ತದೆ. ಅರಣ್ಯ ಇಲಾಖೆಯು ಈಗಾಗಲೇ ರಸ್ತೆ ಹಾಗೂ ನೆಡು ತೋಪುಗಳಲ್ಲಿ ಸಾವಿರಾರು ಸಸಿಗಳನ್ನು ನೆಡುವ ಕಾರ್ಯವೂ ಶುರು ಮಾಡಿದೆ.

ಹತ್ತಿಕುಣಿಯ ರಸ್ತೆಯ ಎರಡೂ ಬದಿಯಲ್ಲಿ ಬೇವು, ಹೊಂಗೆ, ಆಲ, ಮಹಾಘನಿಯಂತಹ ಸಸಿಗಳನ್ನು ನೆಡುವ ಕಾಯಕದಲ್ಲಿ ಕೂಲಿ ಕಾರ್ಮಿಕರು ನಿರತವಾಗಿದ್ದಾರೆ.

ಕೆಲವು ವಾರಗಳಿಂದ ಮಳೆಯೂ ಕೈಕೊಟ್ಟಿದ್ದರಿಂದ ನೆಡಲಾದ ಸಸಿಗಳಿಗೆ ಟ್ರ್ಯಾಕ್ಟರ್ ಮೂಲಕ ನೀರು ಹಾಕಲಾಗುತ್ತದೆ. ಜೊತೆಗೆ ಅರಣ್ಯ ಕಾವಲುಗಾರರು ಸಸಿಗಳ ಸುತ್ತಲೂ ಮುಳ್ಳುಗಳನ್ನು ಕಟ್ಟಿ ಜಾನುವಾರು ಬಾಯಿ ಹಾಕದಂತೆ ರಕ್ಷಣೆ ಮಾಡುತ್ತಿದ್ದಾರೆ. 'ಪ್ರಸಕ್ತ ವರ್ಷ ಯಾದಗಿರಿ ವಿಭಾಗ ವ್ಯಾಪ್ತಿಯ ಸೈದಾಪುರ ತಾವೂರು, ಹತ್ತಿಕುಣಿ ಬಂದಳ್ಳಿ, ಕಡೇಚೂರು -ಸೌರಾಷ್ಟ್ರಹಳ್ಳಿ, ರಾಚನಹಳ್ಳಿ ಗೇಟ್ ಕಡೇಚೂರು ಗ್ರಾಮಗಳ ನಡುವಿನ ಪ್ರತಿ ರಸ್ತೆಯ ಎರಡೂ ಬದಿಯಲ್ಲಿ ತಲಾ 900 ಸಸಿಗಳನ್ನು ನೆಡಲಾಗುತ್ತಿದೆ. ಅದರ ಜೊತೆಗೆ ನಗರದ ಎಪಿಎಂಸಿ, ಪದವಿ ಕಾಲೇಜು ಆವರಣ, ಸರ್ಕಿಟ್ ಹೌಸ್ ರಸ್ತೆಯ ಸರ್ಕಾರಿ ಶಾಲಾ ಮೈದಾನ, ಸೇರಿದಂತೆ ನಗರಸಭೆಗೂ ಒಟ್ಟು 1,800 ಸಸಿಗಳನ್ನು ಕೊಡಲಾಗಿದೆ ಎಂದು ಅರಣ್ಯ ಇಲಾಖೆಯ ಸಿಬ್ಬಂದಿಯೊಬ್ಬರು ತಿಳಿಸಿದರು.

# ಶುಂಠಿ ಬೆಳೆಯಲು ಹಾವೇರಿಗೆ ದಾಂಗುಡಿ ಇಟ್ಟ ಕೇರಳದ ಬೆಳೆಗಾರರು

## ಒಂದು ಎಕರೆಗೆ ಸುಮಾರು 1 ಲಕ್ಷದಿಂದ 1 ಲಕ್ಷದ 50 ಸಾವಿರ ರೂಪಾಯಿವರೆಗೆ ಹಣ ನೀಡುತ್ತಾರೆ.

• **ಉದಯವಾಹಿನಿ ಹಾವೇರಿ:**

ಜಿಲ್ಲೆಯ ರೈತರು ಸಾಮಾನ್ಯವಾಗಿ ಮೆಕ್ಕೆಜೋಳ, ಹತ್ತಿ, ಶೇಂಗಾ, ಸೋಯಾಬಿನ್ ಸೇರಿದಂತೆ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಪ್ರಸ್ತುತ ವರ್ಷ ಸೋಯಾಬಿನ್ ಕಡೆಗೆ ರೈತರು ಹೆಚ್ಚು ವಾಲಿದ್ದಾರೆ. ಈ ಮಧ್ಯೆ ಶುಂಠಿ ಬೇಸಾಯ ಆರಂಭವಾಗಿದೆ.

**1 : ಎಕರೆಗೆ 300ರಿಂದ 350 ಚೀಲ**
**2 : ಪ್ರಸ್ತುತ ಶುಂಠಿಗೆ 60 ಕೆಜಿ ಚೀಲಕ್ಕೆ**
**3 : ಜಮೀನಿನಲ್ಲಿರುವ ಮಣ್ಣಿನ ಗುಣ**

ಸದ್ಯ ಕೇರಳದ ಶುಂಠಿ ಬೆಳೆಗಾರರು ಹಾವೇರಿ ಜಿಲ್ಲೆಯ ಅರೆ ಮಲೆನಾಡು ಪ್ರದೇಶಗಳಲ್ಲಿ ಶುಂಠಿ ಬೆಳೆಯುತ್ತಿದ್ದಾರೆ.

ಪ್ರಸ್ತುತ ಶುಂಠಿಗೆ 60 ಕೆಜಿ ಚೀಲಕ್ಕೆ 7 ಸಾವಿರ ರೂಪಾಯಿ ಬೆಲೆ ಇದ್ದು, ಕೇರಳದ ಶುಂಠಿ ಬೆಳೆಗಾರರಿಗೆ ಸಂತಸ ತಂದಿದೆ. ಅಲ್ಲೊಂದು, ಇಲ್ಲೊಂದು ಸ್ಥಳೀಯ ರೈತರು ಶುಂಠಿ ಬೆಳೆ ಬೆಳೆಯುವ ಸಾಹಸ ಮಾಡಿ ಯಶಸ್ವಿಯಾಗಿದ್ದಾರೆ. ಆದರೂ ಸಹ ಶುಂಠಿ ಬೆಳೆಯ ಕೆಲ ಏರಿಳಿತಗಳು ಜಿಲ್ಲೆಯ ರೈತರಿಗೆ ಇನ್ನೂ ಕರಗತವಾಗಿಲ್ಲ.

**ಹಾವೇರಿಯಲ್ಲಿ ಕೇರಳದ ರೈತರಿಂದ ಶುಂಠಿ ಬೆಳೆ**

**ಕೇರಳದ ಬೆಳೆಗಾರರಿಂದ ಶುಂಠಿ ಬೇಸಾಯ:** ಹಾವೇರಿ ಜಿಲ್ಲೆಯ ಹಾನಗಲ್, ಹಿರೇಕೆರೂರು ಮತ್ತು ರಟ್ಟಿಹಳ್ಳಿ ತಾಲ್ಲೂಕುಗಳಲ್ಲಿ ಕೇರಳದ ಶುಂಠಿ ಬೆಳೆಗಾರರು ದಾಂಗುಡಿ ಇಟ್ಟಿದ್ದಾರೆ.


ಉದಯವಾಹಿನಿ ಚಿತ್ರ

ಸ್ಥಳೀಯ ರೈತರ ಜಮೀನುಗಳನ್ನು 18 ತಿಂಗಳಿಗೆ ಲೀಸ್‌ಗೆ ತೆಗೆದುಕೊಳ್ಳುವ ಅವರು, ಒಂದು ಎಕರೆಗೆ ಸುಮಾರು 1 ಲಕ್ಷದಿಂದ 1 ಲಕ್ಷ 50 ಸಾವಿರ ರೂಪಾಯಿವರೆಗೆ ಹಣ ನೀಡುತ್ತಾರೆ. ಜಮೀನಿನಲ್ಲಿರುವ ಮಣ್ಣಿನ ಗುಣ, ಅಂತರ್ಜಲಮಟ್ಟ ಮತ್ತು ಕೊಳವೆಬಾವಿಗಳಿದ್ದರೆ ಮಾತ್ರ ಈ ದರ ನೀಡುತ್ತಾರೆ. ಕೆಲವೊಂದು ಜಮೀನುಗಳು ಫಲವತ್ತಾಗಿದ್ದರೆ ಅವರೇ ಕೊಳವೆಬಾವಿ ಕೊರೆಸಿ ಶುಂಠಿ ಬೇಸಾಯ ಮಾಡುತ್ತಾರೆ. ಈ ರೀತಿ ಶುಂಠಿ ಬೆಳೆದರೆ ಆ ಜಮೀನಿನಲ್ಲಿ ಎರಡು ವರ್ಷ ಬೇರೆ ಬೆಳೆ ಬರುವುದಿಲ್ಲ. ಮತ್ತೆ ಇದೇ ಜಮೀನಿನಲ್ಲಿ ಶುಂಠಿ ಬೆಳೆಯಬೇಕಾದರೆ ಐದು ವರ್ಷ ಕಾಯಬೇಕು. ಆದರೆ ಈ ರೀತಿ ಶುಂಠಿ ಬೆಳೆಯುವ ಕೇರಳದ ಬೆಳೆಗಾರರಿಗೆ ಹಾವೇರಿ ಜಿಲ್ಲೆ ರೈತರು ಅನುಮತಿಸಿದ್ದಾರೆ.

> **ಈ ವರ್ಷ ಸಹ ಆರಂಭದಲ್ಲಿ ಎರಡು ಸಾವಿರ ರೂಪಾಯಿಗೆ 60 ಕೆಜಿ ಚೀಲ ಮಾರಾಟ ಮಾಡಿದ್ದೇವೆ. ಪ್ರಸ್ತುತ 60 ಕೆಜಿ ಚೀಲಕ್ಕೆ 7 ಸಾವಿರ ರೂಪಾಯಿ ಇದೆ. ಈ ರೀತಿ ಇದ್ದರೆ ನಾವು ಶುಂಠಿಗೆ ಹಾಕಿದ ಖರ್ಚು ತಗೆದು, ರೈತರಿಗೆ ಗುತ್ತಿಗೆ ಹಣ ನೀಡಿದ ನಂತರವೂ ಲಾಭ ಉಳಿಯುತ್ತದೆ. ದರ ಕಡಿಮೆಯಾದರೆ ನಾವು ಸಹ ನಷ್ಟ ಅನುಭವಿಸಬೇಕಾಗುತ್ತದೆ ಎಂದು ಮಾಹಿತಿ ಹಂಚಿಕೊಂಡರು.**
> ಹಾವೇರಿ ಜಿಲ್ಲೆ ರೈತರು

ಶುಂಠಿಯನ್ನು 60 ಕೆಜಿ ಚೀಲ ಪ್ಯಾಕ್ ಮಾಡಿ ಮಾರಾಟ

### ನಾಲ್ಕು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶುಂಠಿ

**ಪ್ರಸ್ತುತ ಹಾವೇರಿಯಲ್ಲಿ 4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ಈ ಪ್ರದೇಶದಲ್ಲಿ ಕೇರಳದ ಶುಂಠಿ ಬೆಳೆಗಾರರದೇ ಸಿಂಹಪಾಲು. ಸ್ಥಳೀಯ ರೈತರು ಶುಂಠಿ ಬೆಳೆಯುವುದು ಸ್ವಲ್ಪ ಕಡಿಮೆ. ಶುಂಠಿ ಬೆಳೆಯಲು ಎಕರೆಗೆ ಸುಮಾರು 9 ರಿಂದ 10 ಲಕ್ಷ ರೂಪಾಯಿ ಖರ್ಚು ಮಾಡಬೇಕು.**

ಮಾಡಲಾಗುತ್ತಿದೆ. ಈ ರೀತಿ ಪ್ಯಾಕ್ ಮಾಡಿದ ಶುಂಠಿಗೆ 5 ಸಾವಿರ ರೂಪಾಯಿಗೂ ಅಧಿಕವಿದ್ದರೆ ಲಾಭ ಸಿಗುತ್ತದೆ. ಅದಕ್ಕಿಂತ ಕಡಿಮೆಯಾದರೆ ಲಾಭಕ್ಕಿಂತ ಹಾನಿಯೇ ಹೆಚ್ಚು ಅಂತಾರೆ ಕೇರಳದ ಶುಂಠಿ ಬೆಳೆಗಾರರು. ಶುಂಠಿ ಮೊಳಕೆಯನ್ನು ಉಪ್ಪಿನಕಾಯಿ ಮತ್ತು ಪೇಸ್ಟ್‌ಗೆ ಬಳಸಲಾಗುತ್ತದೆ. ಇಲ್ಲಿ ಬೆಳೆಯುವ ಶುಂಠಿ ಗುಜರಾತ್ ಅಹ್ಮದಾಬಾದ್, ಚೆನ್ನೈ, ಮುಂಬೈ ಸೇರಿದಂತೆ ದೇಶದ ವಿವಿಧ ಪಟ್ಟಣಗಳಿಗೆ ಮಾರಾಟಕ್ಕೆ ಹೋಗುತ್ತದೆ. ಕೇರಳದ ಶುಂಠಿ ಬೆಳೆಗಾರ ಟೀಟೋ ಮಾತನಾಡಿ, ಪ್ರತಿ ಎಕರೆಗೆ 300ರಿಂದ 350 ಚೀಲ ಶುಂಠಿ ಇಳುವರಿ ಬರುತ್ತದೆ. ದರ ಅಧಿಕವಿದ್ದರೆ ಅಧಿಕ ಲಾಭ ಸಿಗುತ್ತದೆ, ಇಲ್ಲದಿದ್ದರೆ ನಷ್ಟ ಅನುಭವಿಸಬೇಕಾಗುತ್ತದೆ. ಮೊದಲು 60 ಕೆಜಿ ಚೀಲಕ್ಕೆ 2 ಸಾವಿರ ರೂಪಾಯಿ ಇತ್ತು. ಕಳೆದ ವರ್ಷ 60 ಕೆಜಿ ಚೀಲ 500ರಿಂದ 1,500 ರೂಪಾಯಿಗೆ ಮಾರಾಟವಾಗಿದೆ. ಇದರಿಂದ ನಾವು ಸಾಕಷ್ಟು ಹಾನಿ ಅನುಭವಿಸಿದ್ದೇವೆ.

## ಮಿನಿ ನ್ಯೂಸ್

# ವಸತಿ ಶಾಲೆಯಲ್ಲಿ ಕಳಪೆ ಆಹಾರ ಕಂಡು ಶಾಸಕ ಗರಂ

• **ಉದಯವಾಹಿನಿ, ಕಮಠಾಣ**

ಬೀದರ್ ತಾಲ್ಲೂಕಿನ ಕಮಠಾಣ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ದಿಢೀರ್ ಭೇಟಿ ನೀಡಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಕಳಪೆ ಆಹಾರ ಪದಾರ್ಥ ಕಂಡು ಸಿಬ್ಬಂದಿ ಮೇಲೆ ಗರಂ ಆದರು. ವಿದ್ಯಾರ್ಥಿಗಳಿಗೆ ಆಹಾರ ಸಿದ್ಧಪಡಿಸಲು ಸಂಗ್ರಹಿಸಿ ಇಟ್ಟಿದ್ದ ತೊಗರಿ ಬೇಳೆ, ಅಕ್ಕಿ, ಶೇಂಗಾ, ಹೆಸರು ಬೇಳೆ, ಅಡುಗೆ ಎಣ್ಣೆ ಮೊದಲಾದ ಪದಾರ್ಥಗಳನ್ನು ಪರಿಶೀಲಿಸಿದರು. ಆಹಾರ ಪದಾರ್ಥಗಳು ಕಳಪೆ ಗುಣಮಟ್ಟದ್ದಾಗಿವೆ ಎಂದು ತೀವ್ರ ಅಸಮಾಧಾನ ಹೊರ ಹಾಕಿದರು. ತಕ್ಷಣ ದೂರವಾಣಿಯಲ್ಲಿ ಮೇಲಧಿಕಾರಿಗಳನ್ನು ಸಂಪರ್ಕಿಸಿ, ವಸತಿ ಶಾಲೆಗೆ ಕಳಪೆ ಆಹಾರ ಪದಾರ್ಥ ಪೂರೈಕೆ ಆಗಿರುವ ಕುರಿತು ಸಮಗ್ರ ತನಿಖೆ ನಡೆಸಬೇಕು. ಅಧಿಕಾರಿ, ಸಿಬ್ಬಂದಿ, ಗುತ್ತಿಗೆದಾರರು ಯಾರೇ ತಪ್ಪಿತಸ್ಥರಾಗಿದ್ದರೂ ಮುಲಾಜಿಲ್ಲದೆ ಕಠಿಣ ಕ್ರಮ ಜರುಗಿಸಬೇಕು ಎಂದು ತಾಕೀತು ಮಾಡಿದರು. ವಸತಿ ಶಾಲೆಗಳಲ್ಲಿ ಆಹಾರ ಗುಣಮಟ್ಟ, ಸ್ವಚ್ಛತೆ ಕುರಿತು ನಿಯಮಿತ ತಪಾಸಣೆ ನಡೆಸಬೇಕು. ಲೋಪ ಕಂಡು ಬಂದರೆ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಅಡುಗೆ ಮನೆ ಹಾಗೂ ಆಹಾರ ಪರಿಶೀಲನೆ ನಂತರ ಶಾಸಕರು ವಿದ್ಯಾರ್ಥಿಗಳ ಅಹವಾಲು ಆಲಿಸಿದರು. ಮೂಲಸೌಕರ್ಯ, ಗುಣಮಟ್ಟದ ಆಹಾರ ಹಾಗೂ ವಸತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

# ಪಂಚಾಯಿತಿಯಿಂದ ಸೌಕರ್ಯದ ನಿರೀಕ್ಷೆ

• **ಉದಯವಾಹಿನಿ, ಬಸವಕಲ್ಯಾಣ:**

ತಾಲ್ಲೂಕಿನಲ್ಲಿಯೇ ದೊಡ್ಡ ಗ್ರಾಮವಾಗಿರುವ ರಾಜೇಶ್ವರಕ್ಕೆ ಬಹುದಿನದ ಬೇಡಿಕೆಯಂತೆ ಪಟ್ಟಣ ಪಂಚಾಯಿತಿ ಸ್ಥಾನ ದೊರೆತಿದ್ದು, ಜನರು ನಾನಾ ಸೌಕರ್ಯಗಳ ನಿರೀಕ್ಷೆಯಲ್ಲಿದ್ದಾರೆ.

ಗ್ರಾಮ ಪಂಚಾಯಿತಿಯ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿವೆ. ಪಿಡಿಒ ಅವರ ವರ್ಗಾವಣೆಯಾಗಿ ಮುಖ್ಯಾಧಿಕಾರಿಗಳು ಅಧಿಕಾರ ಸ್ವೀಕರಿಸಿ ತಿಂಗಳಾಗಿದೆ. ಈ ಅವಧಿಯಲ್ಲಿ ಮುಖ್ಯಾಧಿಕಾರಿಗಳ ಸ್ಥಾನದ ನೇಮಕಾತಿಯ ಗೊಂದಲ ಮತ್ತು ಸಿಬ್ಬಂದಿಗಳ ಕೊರತೆಯ ಕಾರಣ ನೀರು ಸರಬರಾಜು ಮತ್ತು ಚರಂಡಿ ಸ್ವಚ್ಛತೆಯ ಕಾರ್ಯದಲ್ಲಿ ವ್ಯತ್ಯಯ ಉಂಟಾಗಿದೆ. ಜೊತೆಯಲ್ಲಿಯೇ ಕೆಲ ಸಮಸ್ಯೆಗಳು ಅನೇಕ ದಿನಗಳಿಂದ ಇದ್ದು ಅವು ಕೂಡ ಶೀಘ್ರದಲ್ಲಿ ಬಗೆಹರಿಯಬಹುದು ಎಂಬುದು ಗ್ರಾಮಸ್ಥರ ಅನಿಸಿಕೆಯಾಗಿದೆ.

ಮುಖ್ಯವಾಗಿ ಚರಂಡಿ ವ್ಯವಸ್ಥೆ ಸರಿ ಇಲ್ಲ. ಅದ್ದರಿಂದ ಮಳೆ ಮತ್ತು ಮನೆ ಬಳಕೆಯ ನೀರು ಇಳಿಜಾರಿನಲ್ಲಿರುವ ರಾಷ್ಟ್ರೀಯ ಹೆದ್ದಾರಿ ಕಡೆಗೆ ಹರಿದು ರಸ್ತೆ ಪಕ್ಕದಲ್ಲಿ ಸಂಗ್ರಹಗೊಳ್ಳುತ್ತಿವೆ. ಉತ್ತರ ಭಾಗದಲ್ಲಿನ ಕಂದಕ, ಮತ್ತಿತರೆಡೆಯೂ ಸಂಗ್ರಹಗೊಂಡು ದುರ್ನಾತ ಸೂಸುತ್ತಿದೆ. ಅಲ್ಲಲ್ಲಿ ಕಸದ ರಾಶಿಯೂ ಕಾಣುವಂತಾಗಿದೆ.

ಗ್ರಾಮವು ಹೈದರಾಬಾದ್ ನಿಜಾಮ ಅರಸರ ಆಡಳಿತದಲ್ಲಿ ತಾಲ್ಲೂಕು ಕೇಂದ್ರ (ಪಾಯಗಾ) ಆಗಿತ್ತು. ಅಂದಿನ ಕಚೇರಿ ಕಟ್ಟಡ ಮತ್ತು ಸುತ್ತಲಿನ ಕೋಟೆಯ ತಡೆಗೋಡೆಯಂಥ ಗೋಡೆ, ಕಂದಕ, ಕುದುರೆ ಕಟ್ಟುವ ಸ್ಥಳ, ಬುರುಜ್, ಹುಡೆ, ದೇವಸ್ಥಾನ, ಮಸೀದಿಯ ಅವಶೇಷಗಳು ಈಗಲೂ ನೋಡಲು ಸಿಗುತ್ತವೆ. ಈ ಹಳೆಯ ಕಂದಕದಲ್ಲಿ ಕಸ ಸಂಗ್ರಹಗೊಂಡಿದ್ದು, ಮುಳ್ಳುಕಂಟಿಗಳು ಬೆಳೆದಿದ್ದು ಇಲ್ಲಿಯೂ ಸ್ವಚ್ಛತೆ ಕೈಗೊಳ್ಳಬೇಕು ಎಂಬುದು ಗ್ರಾಮಸ್ಥರ ಆಗ್ರಹವಾಗಿದೆ.

# ಅರ್ಜಿ ತಿರಸ್ಕರಿಸಲು ಒತ್ತಾಯಿಸಿ ಪ್ರತಿಭಟನೆ

• **ಉದಯವಾಹಿನಿ ಮೂಡಿಗೆರೆ:**

ವಿದ್ಯುತ್ ವಿತರಣಾ ಪರವಾನಗಿ ಕೋರಿ ದಿ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ, ಮೂಡಿಗೆರೆ ಕೆಪಿಟಿಸಿಎಲ್ ಎಂಪ್ಲಾಯಿಸ್ ಯೂನಿಯನ್ ಪದಾಧಿಕಾರಿಗಳು, ಮೆಸ್ಕಾಂ ಅಧಿಕಾರಿಗಳು ಹಾಗೂ ವಿದ್ಯುತ್ ಗುತ್ತಿಗೆದಾರರು ಮೆಸ್ಕಾಂ ಕಚೇರಿಯ ಮುಂದೆ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.

ಕಾರ್ಮಿಕ ಮುಖಂಡ ಸುನಿಲ್ ಮಾತನಾಡಿ, 'ವಿದ್ಯುತ್ ಕಾಯ್ದೆ 2003ರ ಕಲಂ 14(6)ರ ಅಡಿಯಲ್ಲಿ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯು ಅಪೂರ್ಣವಾಗಿದೆ. ಸಮಾನಾಂತರ ವಿದ್ಯುತ್ ವಿತರಣೆಗೆ ಅಗತ್ಯವಿರುವ ವಿದ್ಯುತ್ ಮೂಲ ಖರೀದಿ ಹಾಗೂ ಉತ್ಪಾದನಾ ವೆಚ್ಚ, ಮೂಲ ಸೌಕರ್ಯ ನಿರ್ಮಾಣ, ಬಂಡವಾಳ ಹೂಡಿಕೆ. ತಾಂತ್ರಿಕ ಯೋಜನೆ, ಸಿಬ್ಬಂದಿ ನೇಮಕಾತಿ ಕುರಿತ ಸಮಗ್ರ ಮಾಹಿತಿಯನ್ನು ಒದಗಿಸಿಲ್ಲ. ಹೀಗೆ ಅಪೂರ್ಣ ಅರ್ಜಿ ಸಲ್ಲಿಸಿರುವ ಖಾಸಗಿ ಕಂಪನಿಯ ಅರ್ಜಿಯನ್ನು ಸರ್ಕಾರ ತಿರಸ್ಕರಿಸಬೇಕು' ಎಂದು ಒತ್ತಾಯಿಸಿದರು.

ಮುಖಂಡ ಧ್ರುವ ಮಾತನಾಡಿ. 'ರಾಜ್ಯದ ಬೆಸ್ಕಾಂ, ಚೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ವ್ಯಾಪ್ತಿಯ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಮಗಳೂರು, ಮೈಸೂರು. ಹಾಸನ, ಚಾಮರಾಜನಗರ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ರಾಯಚೂರು, ಕಲಬುರಗಿ ಹಾಗೂ ಯಾದಗಿರಿ ಸೇರಿದಂತೆ 19 ಜಿಲ್ಲೆಗಳಲ್ಲಿ ಈಗಿರುವ ಸಾರ್ವಜನಿಕ ವಿದ್ಯುತ್ ವಿತರಣಾ ಕಂಪನಿಗಳಿಗೆ ಸಮಾನಾಂತರವಾಗಿ ಖಾಸಗಿ ಕಂಪನಿಗೆ ಪರವಾನಗಿ ನೀಡುವುದು ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ದಾರಿ ಮಾಡಿಕೊಡಲಿದೆ' ಎಂದು ಆತಂಕ ವ್ಯಕ್ತಪಡಿಸಿದರು

# ಕುಡಿಯುವ ನೀರಿನ ಸಮಸ್ಯೆಗಳ ಮಾಹಿತಿ ನೀಡಲು ಜಿಲ್ಲಾಧಿಕಾರಿ ಸೂಚನೆ

• **ಉದಯವಾಹಿನಿ ರಾಯಚೂರು:**

ಜಿಲ್ಲೆಯಲ್ಲಿ ಪ್ರಸ್ತುತ ಮಳೆ ಕಡಿಮೆಯಾಗಿರುವುದರಿಂದ ಮುಂದಿನ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಗಳಾಗಬಹುದು ಎಂಬುದರ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕೂಡಲೇ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

ನಗರದ ನೂತನ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸಗೊಬ್ಬರ, ಮಳೆಹಾನಿ ಮುಂತಾದ ವಿಷಯಗಳ ಕುರಿತು ಚರ್ಚಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅವರು ಮಾತನಾಡಿದರು.'ಜಿಲ್ಲೆಯ ಆಯಾ ತಾಲ್ಲೂಕಿನ ಕೆರೆಗಳಲ್ಲಿ ಎಷ್ಟು ನೀರು ಇದೆ. ಮತ್ತು ಎಷ್ಟು ದಿನಕ್ಕೆ ಆಗುವಷ್ಟು ಇದೆ ಎನ್ನುವ ಕುರಿತು ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳು ಕೂಡಲೇ ನೀಡಬೇಕು. ಎಲ್ಲಾ ಕಾಲುವೆಗಳನ್ನು ಸರಿಯಾಗಿ ಸ್ವಚ್ಛತೆ ಮಾಡಬೇಕು. ಈ ಸಲ ಜುಲೈನಲ್ಲಿ ಡ್ಯಾಂ ನಿಂದ ನೀರು ಬಿಟ್ಟಾಗ ಮೈಲ್‌ನಿಂದ ಮೈಲಿಗೆ ತಂಡಗಳನ್ನು ಮಾಡಿ ನೀರನ್ನು ಸರಿಯಾದ ರೀತಿಯಲ್ಲಿ ತಲುಪಿಸುವ ನೀರಾವರಿ ಇಲಾಖೆಯ ಪಾತ್ರ ಬಹಳ ಮಹತ್ವದ್ದಾಗಿದೆ. ಈ ವರ್ಷ ತುಂಗಭದ್ರಾ ಡ್ಯಾಂನಲ್ಲಿ ಕಳೆದ ವರ್ಷಕ್ಕಿಂತ ನೀರು ಈಗ ಕಡಿಮೆ ಇದೆ' ಎಂದು ಹೇಳಿದರು.

